ಸಂಪುಟ 01 | ಸಂಚಿಕೆ 110 | ಭಾನುವಾರ 08 ಮಾರ್ಚ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸಗೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಗುತ್ತದೆ. ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಗುರುತಿಸಿ, ಸಬಲೀಕರಣಕ್ಕೆ ಒತ್ತು ನೀಡುವ ದಿನವಿದು. ಈ ದಿನದಂದು ಜಗತ್ತಿನಾದ್ಯಂತ ಸಭೆ, ಸಮಾರಂಭ, ರ್ಯಾಲಿಗಳು ಮತ್ತು ಮಹಿಳಾ ಸಾಧಕರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳು ನಡೆಯುತ್ತವೆ.

## ಸುಭಾಷಿತ

ಜನ ಆದರ್ಶವಾದಿಗಳನ್ನು ಪೂಜಿಸುವುದರಲ್ಲಿ ತೃಪ್ತರು. ಅನುಸರಿಸುವುದರಲ್ಲಿ ಯಾವಾಗಲೂ ಹಿಂದೆಯೇ.

ಶಿವರಾಮ ಕಾರಂತ

## ಕಸದ ರಾಶಿಗಳ ತೆರವು

ನೈಜ್ಯ ದೆಸೆ ನ್ಯೂಸ್

ಹನುಮಸಾಗರ: ಪಟ್ಟಣದಲ್ಲಿ ಎಸೆದಿರುವ ಕಸದ ರಾಶಿ ಹಾಗೂ ದುರ್ವಾಸನೆಗೆ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿವಾರಣೆ ಪಟ್ಟಣ ಪಂಚಾಯಿತಿ ಮುಂದಾಗಿದೆ. ಪಂಚಾಯಿತಿ ವ್ಯಾಪ್ತಿಯಲ್ಲಿ ತಾತ್ಕಾಲಿಕವಾಗಿ ಕಸದ ರಾಶಿಗಳನ್ನು ತೆರವುಗೊಳಿಸುವ ಕಾರ್ಯ ಆರಂಭಿಸಲಾಗಿದೆ.ಪಟ್ಟಣ ಪಂಚಾಯತಿ ಹಿಂಭಾಗದಲ್ಲಿನ ಕಸದ ರಾಶಿ, ಪ್ರಮುಖ ರಸ್ತೆ ಬದಿಗಳಲ್ಲಿ ಸಂಗ್ರಹವಾಗಿದ್ದ ಕಸವನ್ನು ತೆರವುಗೊಳಿಸಲಾಗಿದೆ.



ಪಟ್ಟಣದ ಜನರು ಕಸದ ರಾಶಿಯಿಂದ ಎದುರಿಸುತ್ತಿರುವ ಸಮಸ್ಯೆಗಳ ಕುರಿತು 'ಕಸದ ರಾಶಿಗೆ ನರಳುತ್ತಿದೆ ಹನುಮಸಾಗರ' ಎಂಬ ಶೀರ್ಷಿಕೆಯಡಿ 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು. ಪಟ್ಟಣ ಪಂಚಾಯಿತಿ ಹಾಗೂ ಮೇಲಾಧಿಕಾರಿಗಳು ತಕ್ಷಣ ಸ್ಪಂದಿಸಿದೆ. ಪಟ್ಟಣಕ್ಕೆ ಶಾಶ್ವತ ಪರಿಹಾರವಾಗಿ ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಗೆ ಅಗತ್ಯ ಕ್ರಮಗಳನ್ನು ಆರಂಭಿಸಲಾಗಿದೆ ಎಂದು ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ. ಪಟ್ನಾ ಪಂಚಾಯತಿಯ ಹಿಂದುಗಡೆ ಇರುವ ಕಸದರಾಶಿಯನ್ನು ತೆರವುಗೊಳಿಸಿ ಸುಗಮ ದಾರಿಗೆ ಅಣಿವು ಮಾಡಿ ಕೊಡಲಾಯಿತು.

# ಹೈಕಮಾಂಡ್ ಹೇಳಿದರೆ ಅಧಿಕಾರ ಬಿಡ್ತೀನಿ ಸಿಎಂ ಸಿದ್ದರಾಮಯ್ಯ

ಮೈಸೂರು: ಕಾಂಗ್ರೆಸ್ ಹೈಕಮಾಂಡ್ ಅವಕಾಶ ಕೊಟ್ಟರೆ, ಮುಂದಿನ ಎರಡು ಬಜೆಟ್‌ಗಳನ್ನು ಮಂಡಿಸುತ್ತೇನೆ. ಇಲ್ಲವೇ ಅಧಿಕಾರ ಬಿಡಿ ಎಂದರೆ ಬಿಟ್ಟುಕೊಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾವು ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧವಾಗಿರುವುದಾಗಿ ಪುನರ್‌ಸ್ಪಷ್ಟಪಡಿಸಿದರು. ಈಗಾಗಲೇ 17 ಬಜೆಟ್‌ಗಳನ್ನು ಮಂಡಿಸಿದ್ದೇನೆ. ರಾಜ್ಯದಲ್ಲಿ ಅತೀ ಹೆಚ್ಚು ಬಜೆಟ್ ಮಂಡಿಸಿರುವುದು ನಾನೇ. ಇನ್ನೆರಡು ಬಜೆಟ್ ಮಂಡಿಸಿದರೆ, 19 ಬಜೆಟ್‌ಗಳಾಗಿದ್ದು, ದಾಖಲೆ ನಿರ್ಮಾಣವಾಗುತ್ತದೆ. ಆದರೆ ತಮಗೆ ದಾಖಲೆ ಮುರಿಯುವುದು ಮುಖ್ಯ ಅಲ್ಲ ಎಂದರು.



ರಾಜ್ಯದ ಜನ, ಕಾಂಗ್ರೆಸ್ ಹೈಕಮಾಂಡ್ ಅವಕಾಶ ಕೊಟ್ಟರೆ ಇನ್ನೆರಡು ಬಜೆಟ್‌ಗಳನ್ನು ಮಂಡಿಸುತ್ತೇನೆ. ನನಗೆ ಹೈಕಮಾಂಡ್ ಮೇಲೆ ವಿಶ್ವಾಸವಿದೆ. ಅವರು ಅಧಿಕಾರದಲ್ಲಿ ಮುಂದುವರಿಯಿರಿ ಎಂದರೆ ಮುಂದುವ-ರಿಯುತ್ತೇನೆ. ಬಿಡಿ ಎಂದರೆ ಬಿಡುತ್ತೇನೆ. ವಾಸ್ತವ ಬಿಟ್ಟು ಮಾತನಾಡುವುದಿಲ್ಲ ಎಂದು ಹೇಳಿದರು. ಬಜೆಟ್ ಹಾಗೂ ಯುಗಾದಿ ನಂತರ ಸಿದ್ದರಾಮಯ್ಯ ಅವರು, ಮುಖ್ಯಮಂತ್ರಿ ಹುದ್ದೆ ತೊರೆಯುತ್ತಾರೆ ಎಂದು ಚರ್ಚೆಗಳು ಕೇಳಿ ಬರುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಅವರು ಏನು ಬೇಕಾದರೂ ಹೇಳಿಕೊಳ್ಳಲಿ. ಆದರೆ ನಾನು ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧವಾಗಿರುತ್ತೇನೆ. ಸಿದ್ದರಾಮಯ್ಯ ಅವರು ಮುಂದುವರೆಯಬೇಕೆಂದು ಮೈಸೂರು ಜನರಿಗಷ್ಟೇ ಅಲ್ಲ, ರಾಜ್ಯದ ಜನರಿಗೂ ಆಸೆ ಇದೆ ಎಂದರು.

ಕೇಂದ್ರದಲ್ಲಿ ಮೋದಿ ಅವರು ಅಧಿಕಾರಕ್ಕೆ ಬಂದ ಬಳಿಕ ಅಡುಗೆ ಅನಿಲದ ಬೆಲೆ ಹಲವಾರು ಬಾರಿ ಹೆಚ್ಚಳವಾಗಿದೆ. ಇದರಿಂದ ಜನಸಾಮಾನ್ಯರಿಗೆ ತೊಂದರೆಯಾಗಿದೆ ಎಂದು ವಿಷಾದಿಸಿದರು. ಸಿದ್ದರಾಮಯ್ಯ ಅವರು ಸಾಲದ ಬಜೆಟ್ ಮಂಡಿಸಿದ್ದಾರೆ ಎಂದು ಟೀಕೆ ಮಾಡುತ್ತಿರುವ ಬಿಜೆಪಿಯವರು ಮೊದಲು ವಿತ್ತೀಯ ಹೊಣೆಗಾರಿಕೆ ಕಾಯ್ದೆಯನ್ನು

4ನೇ ಪುಟಕ್ಕೆ

# ವಿಧ್ಯಾಭ್ಯಾಸದ ಜೊತೆ ಸಂಸ್ಕಾರ ಮುಖ್ಯ :ಬಸವರಾಜ್ ನಾಯಕ




ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಮಾ 8 ಇತ್ತಿಚೆಗೆ ಮಕ್ಕಳಿಗೆ ವಿಧ್ಯಾಭ್ಯಾಸದ ಜೊತೆ ಸಂಸ್ಕಾರ ಮುಖ್ಯ ವಾಗಿದೆ ಪಾಲಕರು ಮಕ್ಕಳಿಗೆ ವಿದ್ಯಾಭ್ಯಾಸದ ಜೊತೆಗೆ ಮನೆಯಲ್ಲಿ ಸಂಸ್ಕಾರ ಕಲಿಸಬೇಕಾಗಿದೆ ಎಂದು ಜಿಲ್ಲಾ ಲೋಕೋಪಯೋಗಿ ಕಾರ್ಯನಿರ್ವಾಹಕ ಅಭಿಯಂತಕರಾದ ಬಸವರಾಜ ನಾಯಕ ಅಭಿಪ್ರಾಯ ಪಟ್ಟರು.

ಅವರಿಂದು ಪಟ್ಟಣ ನರಕಲದಿನ್ನಿ ಗ್ರಾಮದಲ್ಲಿ ವಿದ್ಯಾ ಭಾರತಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ . ಸಂಸ್ಥೆ ಬೆಳೆಯಬೇಕಾದರೆ ಕೇವಲ ಸಂಸ್ಥೆಯ ಸಿಬ್ಬಂದಿಗಳು ಮುಖ್ಯವಾಗುವುದಿಲ್ಲ ಅದಕ್ಕೆ ಪಾಲಕರು ಊರಿನ ಗಣ್ಯರ ಶ್ರಮ ಪಾತ್ರ ಬಾಹಳಷ್ಟು ಮುಖ್ಯವಾಗಿರುತ್ತದೆ. ನಾನು 1986 ರಲ್ಲಿ ನಾಗರಹಾಳ ಗ್ರಾಮದಲ್ಲಿ ಓದಿದ್ದೇನೆ ಏಳನೇ ತರಗತಿ ಇತ್ತಿಚೆಗೆ 11 ದೇಶಗಳನ್ನು ಸುತ್ತಾಡಿದ್ದೇನೆ. 26 ರಾಜ್ಯ ತಿರುಗಾಡಿದ್ದೇನೆ ಅದಕ್ಕೆ ಕಾರಣ ವಿದ್ಯಾಕಿಂತ ಸಂಸ್ಕಾರ ಕಾರಣ.

ಇದರಲ್ಲಿ ಮಾರ್ಕ್ಸ ಮುಖ್ಯವಾಗುವುದಿಲ್ಲ ಸಂಸ್ಕಾರ ಮುಖ್ಯ ಅದೇ ನನಗೆ ಅರ್ಥ ವಾಗಿದ್ದು. ಅದಕ್ಕೆ ಇಂದಿನ ಮಕ್ಕಳಲ್ಲಿ ಸಂಸ್ಕಾರಕ್ಕೆ ಒತ್ತು ನೀಡಬೇಕು. 1ರಿಂದ 5ನೇ ತರಗತಿಗಳ ವರಿಗೆ ಬೋಧನೆ ಕಠಿಣ, ಕಾರಣ ಈ ಹಂತ ಮಕ್ಕಳ ಬೌದ್ಧಿಕ, ದೈಹಿಕ ಹಾಗೂ ಮಾನಸಿಕ ಸ್ಥಾನಪಲ್ಲಟದ ಹಂತವಾ ಗಿದೆ. ಅವರ ಕೌಶಲ್ಯಕ್ಕೆ ತಕ್ಕಂತೆ ಶಿಕ್ಷಣ ನೀಡಬೇಕು. ಸ್ವಾಭಾವಿಕವಾದ ಬೆಳವಣಿಗೆಯಲ್ಲಿ ಗುಣಮಟ್ಟ ಕಾಣಬಹುದು ಎಂದರು.

ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದು ಪಾಲಕರ ಕರ್ತವ್ಯವಾಗಿದೆ. ಸಕಾಲದಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಪ್ರಭುಸ್ವಾಮಿ ಶ್ರೀಗಳು, ಗಿರಿಯಪ್ಪ, ರೇಷ್ಮೆ ಇಲಾಖೆಯ ಉಪನಿರ್ದೇಶಕ ರಾಜೇಂದ್ರ ಕುಮಾರ್ ದೇವದುರ್ಗ, ಹನುಮೇಶ, ದೀಕ್ಷಾ, ಬಸಮ್ಮ ಸೇರಿದಂತೆ ಇನ್ನಿತರರು ಇದ್ದರು.

# ವಿರೂಪಾಕ್ಷ ಮಹಾಸ್ವಾಮಿಗಳ 12ನೇ ಪುಣ್ಯಸ್ಮರಣೆ ಅಂಗವಾಗಿ ಉಚಿತ ರಕ್ತದಾನ ಶಿಬಿರ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ತಾಲೂಕಿನ ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠದ ಲಿಂಗೈಕ್ಯ ಶ್ರೀ ವಿರೂಪಾಕ್ಷ ಮಹಾಸ್ವಾಮಿಗಳ 12ನೇ ಪುಣ್ಯಸ್ಮರಣೆಯ ಅಂಗವಾಗಿ, ಪಟ್ಟಣದ ಕಳಿಂಗ ಪದವಿ ಪೂರ್ವ ಕಾಲೇಜಿನಲ್ಲಿ ಇದೇ ಮಾರ್ಚ್ 9 ರಂದು ಬೆಳಿಗ್ಗೆ 10:00 ಗಂಟೆಗೆ ಉಚಿತ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.



ಪ್ರತಿ ವರ್ಷದಂತೆ ಈ ವರ್ಷವೂ ಶ್ರೀಮಠದ ವತಿಯಿಂದ ಸಮಾಜಮುಖಿ ಕಾರ್ಯಕ್ರಮವಾಗಿ ಈ ಶಿಬಿರವನ್ನು ಆಯೋಜಿಸಲಾಗುತ್ತಿದ್ದು, ಲಿಂಗೈಕ್ಯ ಶ್ರೀಗಳ ಸ್ಮರಣೆಯನ್ನು ರಕ್ತದಾನದಂತಹ ಪವಿತ್ರ ಕಾರ್ಯದ ಮೂಲಕ ಸಾರ್ಥಕಗೊಳಿಸುವ ಉದ್ದೇಶವನ್ನು ಹೊಂದಲಾಗಿದೆ. ರಕ್ತದಾನವು ಮಹಾದಾನವಾಗಿದ್ದು, ಒಬ್ಬ ವ್ಯಕ್ತಿ ನೀಡುವ ರಕ್ತವು ಮತ್ತೊಬ್ಬರ ಜೀವ ಉಳಿಸಲು ಸಹಕಾರಿಯಾಗುತ್ತದೆ. ಆದ್ದರಿಂದ ಭಕ್ತಾದಿಗಳು, ಯುವಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಶಿಬಿರಕ್ಕೆ ಆಗಮಿಸಿ,

ರಕ್ತದಾನ ಮಾಡುವ ಮೂಲಕ ಈ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು" ಎಂದು ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.ಉಚಿತ ರಕ್ತ ದಾನ ಶಿಬಿರವು ದಿ: 09-03-2026 (ಸೋಮವಾರ) ಸಮಯ ಬೆಳಿಗ್ಗೆ 10:00 ಗಂಟೆಯಿಂದ ಮಾನ್ವಿಯ ಕಳಿಂಗ ಪಿ.ಯು. ಕಾಲೇಜಿನಲ್ಲಿ ನಡೆಯಲಿದೆ.

# ಚಿತ್ತಾಪುರದಲ್ಲಿ 1,069 ಕೋಟಿ ಯೋಜನೆಗಳ ಉದ್ಘಾಟನೆಗೆ ಸಿದ್ಧತೆ ಪರಿಶೀಲನೆ

ನೈಜ್ಯ ದೆಸೆ ನ್ಯೂಸ್

ಕಲಬುರಗಿ: ಜಿಲ್ಲೆಯ ಚಿತ್ತಾಪುರ ಪಟ್ಟಣದ ಹೊರವಲಯದಲ್ಲಿ ನಾಳೆ ನಡೆಯಲಿರುವ ಅಡಿಗಲ್ಲು ಹಾಗೂ ಉದ್ಘಾಟನಾ ಕಾರ್ಯಕ್ರಮದ ಪೂರ್ವ ಸಿದ್ಧತೆಯನ್ನು ಇಂದು ಸಚಿವ ಪ್ರಿಯಾಂಕ್ ಖರ್ಗೆ ಪರಿಶೀಲಿಸಿದರು.

ಅಂದಾಜು 1,069 ಕೋಟಿ ವೆಚ್ಚದ ಯೋಜನೆಗಳಿಗೆ ಅಡಿಗಲ್ಲು ಹಾಗೂ ಉದ್ಘಾಟನೆ ನಡೆಯಲಿದ್ದು, ರಾಜ್ಯಸಭೆ ಪ್ರತಿ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಉದ್ಘಾಟನೆ ನೆರವೇ-ರಿಸಲಿದ್ದಾರೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಸಚಿವರಾದ ಶರಣಪ್ರಕಾಶ ಪಾಟೀಲ್, ಲೋಕಸಭಾ ಸಂಸದರಾದ ರಾಧಾಕೃಷ್ಣ ದೊಡ್ಡಮನಿ ಅವರು ಉಪಸ್ಥಿತ-



ರಿರಲಿದ್ದಾರೆ. ಶಾಸಕರು, ವಿಧಾನಪರಿಷತ್ ಸದಸ್ಯರು, ಮಾಜಿ ಸಚಿವರು, ಮಾಜಿ ಶಾಸಕರು ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಯಾವುದೇ ಲೋಪವಾಗದಂತೆ ಅಚ್ಚುಕಟ್ಟಾಗಿ ನಡೆಸಿಕೊಡುವ ಸಲುವಾಗಿ ವೇದಿಕೆ, ಊಟದ ಸ್ಥಳ, ಆಸನ ವ್ಯವಸ್ಥೆಯನ್ನು ಪರಿಶೀಲಿಸಿ ಅಧಿಕಾರಿಗಳಿಗೆ ಸಚಿವರು ಅಗತ್ಯ ಸಲಹೆಗಳನ್ನು ನೀಡಿದರು.

# ಹಳೆ ಮೀಸಲಾತಿ ಶೇ.50 ರನ್ವಯ ನೇಮಕಾತಿಗೆ ಸರ್ಕಾರ ಮುಂದಾಗಲು ಒತ್ತಾಯ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಒಳ ಮೀಸಲಾತಿಯಿಂದ ಬಲಗೈ, ಬಂಜಾರ, ಭೋವಿ, ಕೊರಮ, ಕೊರಚ, ಅಲೆಮಾರಿ ಸಮುದಾಯಗಳಿಗೆ ಅನ್ಯಾಯವಾಗುತ್ತಿರುವದ-ರಿಂದ ಹಳೆ ಮೀಸಲಾತಿಯ ಶೇ.50ರನ್ವಯ 56 ಸಾವಿರ ಹುದ್ದೆಗಳ ನೇಮಕಾತಿಗೆ ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಒತ್ತಾಯಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ರವಿ ಚಿಗರಿ ಮಾತನಾಡಿ, ಒಳಮೀಸಲಾತಿ ಗೊಂದಲಗಳು ಪರಿಹಾರವಾಗುವ ತನಕ ಹಳೆಯ ಮೀಸಲಾತಿ ಪದ್ಧತಿಯನ್ನೇ ಅನ್ವಯಿಸಿ, ಖಾಲಿ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. ಪರಿಶಿಷ್ಟ ಜಾತಿಗಳಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಜಾರಿಗೆ ತಂದಿರುವ ಒಳಮೀಸಲಾತಿ




ವರದಿ ಸಂಬಂಧಿತ ಸಮಸ್ಯೆಗಳು ಸಂಪೂರ್ಣವಾಗಿ ಪರಿಹಾರವಾಗುವ ತನಕ, ಪ್ರಸ್ತುತ ಶೈಕ್ಷಣಿಕ ಕ್ಷೇತ್ರ ಮತ್ತು ಉದ್ಯೋಗಗಳಿಗೆ ಅನ್ವಯಿಸುತ್ತಿರುವ ಒಳಮೀಸಲಾತಿಯ ಕಾರ್ಯಚಟುವಟಿ-ಕೆಗಳಿಗೆ ತಕ್ಷಣ ತಡೆಯಾಜ್ಞೆ ನೀಡಬೇಕು. ಹೊಸ ಜಾತಿ ಪ್ರಮಾಣ ಪತ್ರಗಳ ವಿತರಣೆ ತುರ್ತಾಗಿ ನಿಲ್ಲಿಸಿ, ಈಗಾಗಲೇ ನೀಡಿರುವ ಹಳೆಯ ಜಾತಿ ಪ್ರಮಾಣ ಪತ್ರಗಳನ್ನೇ ಮುಂದುವರೆಸಬೇಕು.

ಒಳಮೀಸಲಾತಿಗೆ ಸಂಬಂಧಿಸಿದ ರೋಸ್ಟರ್ ಬಿಂದುಗಳನ್ನು ಪರಿಷ್ಕರಿಸಿ, ನ್ಯಾಯ ಸಮ್ಮತವಾಗಿ ಸರಿಪಡಿಸಬೇಕೆಂದರು. ಬಲಗೈ ಮುಖಂಡ ಮೌನೇಶ ದೊಡ್ಡಮನಿ ಅಮೀನಗಡ ಮಾತನಾಡಿ ಒಳಮೀಸಲಾತಿ ಅನ್ಯಾಯವನ್ನು ಒಂದು ವಾರದೊಳಗೆ ಬಗೆಹ-ರಿಯದಿದ್ದರೆ ಸಮುದಾಯದಿಂದ ಸಭೆ ನಡೆಸಿ ರಾಜ್ಯಾದ್ಯಂತ ಹೋರಾಟಕ್ಕೆ ಕರೆ ನೀಡಲಾಗುವುದು ಎಂದು ಎಚ್ಚರಿಸಿದರು. ದೇವಪ್ಪ ರಾಠೊಡ್ ಮಾತನಾಡಿ, ಶಿಕ್ಷಣ, ಹಾಸ್ಟೇಲ್ ಪ್ರವೇಶ ಮತ್ತು ಉದ್ಯೋಗ ನೇಮಕಾತಿ ರೋಸ್ಟರ್ ಹಂಚಿಕೆ ಮಾಡಿ ಈ ಹಿಂದೆ ಸರ್ಕಾರ ಹೊರಡಿಸಿರುವ ಎಲ್ಲಾ ಆದೇಶ, ಸುತ್ತೋಲೆಗಳನ್ನು ಕೂಡಲೇ ಹಿಂಪಡೆಯಬೇಕು,

ಈಗಾಗಲೇ ನಡೆಸಲಾಗಿರುವ ವಿವಿಧ ಇಲಾಖೆ, ನಿಗಮ, ಪ್ರಾಧಿಕಾರದ ನೇಮಕಾತಿಗಳನ್ನು ರದ್ದುಗೊಳಿಸಿ ಪರಿಶಿಷ್ಟ ಜಾತಿ ಪ್ರವರ್ಗ ಎ,ಬಿ,ಸಿ ಎಂದು ನಮೂದಿಸಿ ನೀಡಲಾಗಿರುವ ಜಾತಿ ಪ್ರಮಾಣ ಪತ್ರಗಳನ್ನು ಹಿಂಪಡೆದು, ಹಳೆ ಜಾತಿ ಪ್ರಮಾಣ ಪತ್ರಗಳನ್ನು ಪರಿಗಣಿಸಬೇಕೆಂದರು. ಮುಂಬವರುವ ಆಧಿವೇಶನದಲ್ಲಿ ಶಾಸಕ ಆರ್.ಬಸನಗೌಡ ತುರವಿಹಾಳ ಈ ಬಗ್ಗೆ ಸದನದಲ್ಲಿ ಚರ್ಚಿಸಿ ಅಪ್ರಾಯೋಗಿಕ ಒಳ ಮೀಸಲಾತಿಯನ್ನು ರಾಜ್ಯ ಸರ್ಕಾರ ಕೈ ಬಿಡಲು ಒತ್ತಡ ಹೇರಬೇಕು, ರಾಜ್ಯ ಸರ್ಕಾರ ಯಾರದ್ದೋ ಒತ್ತಡಕ್ಕೆ ಮಣಿದು ಏಕಪಕ್ಷೀಯವಾಗಿ ವರ್ಗೀಕರಣ-ಕ್ಕೆ ಮುಂದಾದರೆ ಬಲಗೈ, ಬಂಜಾರ, ಭೋವಿ, ಚರ್ಮಗಾರ, ಸಮಗಾರ, ಕೊರಮ, ಕೊರಚ, ಅಲೆಮಾರಿ ಸಮುದಾಯಗಳು ಜಂಟಿಯಾಗಿ ಬೃಹತ್ ಹೋರಾಟವನ್ನು ಹಮ್ಮಿಕೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಮಲ್ಲಯ್ಯ ನಾಗರಾಳ, ರಂಗಪ್ಪ ಅರಿಕೇರಿ, ಯಂಕೋಬ ಭಜಂತ್ರಿ, ತಿಮ್ಮಣ್ಣ ಗುಡಸಲಿ ಇದ್ದರು.

## ಸಾಹಿತ್ಯ ಸಿಂಚನ

ಮಹಿಳೆ

ಮಹಿಳೆ ಎಂದರೆ ಮಮತೆಯ ಮೂರ್ತಿ,
ಮನದೊಳಗೆ ತುಂಬಿದ ಮಧುರ ಸೌಂದರ್ಯ.
ಸಹನೆಯ ಸಾಗರ, ಪ್ರೀತಿಯ ದೀಪ,
ಸಂಸಾರದ ಬೆಳಕಾಗುವ ಮಹಾ ಶಕ್ತಿ.

ತಾಯಿಯಾಗಿ ತಾಳ್ಮೆಯ ಪಾಠ ಹೇಳುವಳು,
ಸಹೋದರಿಯಾಗಿ ಸ್ನೇಹದ ಸೇತುವೆ ಕಟ್ಟುವಳು.
ಪತ್ನಿಯಾಗಿ ಜೀವನದ ಸಂಗಾತಿಯಾಗುವಳು,
ಮಗಳಾಗಿ ಮನೆಯ ಸಂತೋಷವಾಗುವಳು.

ಅವಳ ಹೃದಯ ದಯೆಯ ತೋಟ,
ಅವಳ ಮಾತು ಮಧುರ ಗೀತ.
ಸಮಾಜದ ಬೆಳಕಾಗುವ ಅವಳು,
ಜಗದ ಸೌಂದರ್ಯವೇ ಮಹಿಳೆ

ಅರುಣಾ ಬಿ

# ಸಿಂಧನೂರು: ಸೌಹಾರ್ದ ಇಫ್ತಾರ್ ಕೂಟ ಹಾಗೂ ಮಹಿಳಾ ದಿನಾಚರಣೆ ಯಶಸ್ವಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಮಾಅತೆ ಇಸ್ಲಾಮಿ ಹಿಂದ್ ಮಹಿಳಾ ವಿಭಾಗ ಸಿಂಧನೂರು ಹಾಗೂ ಜಿ.ಐ.ಓ (GIO) ಸಿಂಧನೂರು ಘಟಕದ ವತಿಯಿಂದ ಸೌಹಾರ್ದ ಇಫ್ತಾರ್ ಕೂಟ ಹಾಗೂ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಮಾರ್ಚ್ 6, 2026 ರಂದು ಪಟ್ಟಣದ ಪಟೇಲ್ ವಾಡಿಯ ಮಸ್ಜಿದ್-ಎ-ಹುದಾ ನಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.**




ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ॥ ಜೀವನ ಜ್ಯೋತಿ (ಗೈನಕಾಲಜಿಸ್ಟ್, ಅಒಅ ತುರವಿಹಾಲ್ ಹಾಗೂ ಸ್ಪರ್ಶಾ ಮದರ್ ಅಂಡ್ ಚೈಲ್ಡ್ ಆಸ್ಪತ್ರೆ), ಶ್ರೀಮತಿ ಶೋಭಾ ದೇವಿ ವಸ್ತ್ರದ್ (ಸಿಂಧನೂರು) ಹಾಗೂ ಶ್ರೀಮತಿ ಹುಲಿಗೆಮ್ಮ (ಹೆಡ್ ಕಾನ್ಸ್ಟೇಬಲ್, ಸಿಂಧನೂರು) ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ಅಧ್ಯಕ್ಷತೆಯನ್ನು ಶ್ರೀಮತಿ ಆಯಿಶಾ (ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪೋತ್ನಾಳ್ ಹಾಗೂ ಜಮಾಅತೆ ಇಸ್ಲಾಮಿ ಹಿಂದ್ ಮಹಿಳಾ ವಿಭಾಗದ ಸಂಚಾಲಕರು, ಪೋತ್ನಾಳ್) ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಜಮಾಅತೆ ಇಸ್ಲಾಮಿ ಹಿಂದ್ ಮಹಿಳಾ ವಿಭಾಗದ ಘಟಕ ಅಧ್ಯಕ್ಷೆಯರಾದ ಸುಮಯ್ಯ ಬೇಗಮ್, ಕಾರ್ಯದರ್ಶಿಯಾದ ಅತಿಯಾ ಫೌಝಿಯಾ ಹಾಗೂ ಗರ್ಲ್ಸ್ ಇಸ್ಲಾಮಿಕ್ ಆರ್ಗನೈಜೇಷನ್ (GIO) ಸ್ಥಾನೀಯ ಅಧ್ಯಕ್ಷೆಯರಾದ ನೇಹಾ ಸಮ್ರೀನ್ ಉಪಸ್ಥಿತರಿದ್ದರು.

ತಮ್ಮ ಭಾಷಣದಲ್ಲಿ ಶ್ರೀಮತಿ ಆಯಿಶಾ ಅವರು ಸೌಹಾರ್ದ ಇಫ್ತಾರ್ ಕೂಟದ ಉದ್ದೇಶವನ್ನು ವಿವರಿಸಿ, ಇಂದಿನ ಸಮಾಜದಲ್ಲಿ ಮನುಷ್ಯ ಮನುಷ್ಯರ ನಡುವೆ ದ್ವೇಷ ಹೆಚ್ಚುತ್ತಿರುವ ಸಂದರ್ಭದಲ್ಲಿ ಪರಸ್ಪರ ಪ್ರೀತಿ, ವಿಶ್ವಾಸ ಮತ್ತು ಸಹೋದರತ್ವವನ್ನು ಬೆಳೆಸುವುದು ಅತ್ಯಗತ್ಯವಾಗಿದೆ ಎಂದು ಹೇಳಿದರು. ರಂಜಾನ್ ತಿಂಗಳಲ್ಲಿ ಉಪವಾಸವು ಪ್ರತಿಯೊಬ್ಬ ಮುಸ್ಲಿಮರ ಮೇಲೆ ಕಡ್ಡಾಯವಾಗಿದ್ದು, ಅದರ ಮುಖ್ಯ ಉದ್ದೇಶ ದೇವಭಯ ಮತ್ತು ಆತ್ಮ ನಿಯಂತ್ರಣವನ್ನು ಬೆಳೆಸುವುದಾಗಿದೆ ಎಂದು ತಿಳಿಸಿದರು. ಇಂದಿನ ಸಮಾಜದಲ್ಲಿ ನಡೆಯುತ್ತಿರುವ ಅನೇಕ ದೌರ್ಜನ್ಯಗಳು, ಭ್ರಷ್ಟಾಚಾರ, ಮೋಸ, ವಂಚನೆ ಹಾಗೂ ಕ್ರೌರ್ಯಗಳಿಗೆ ಮೂಲ ಕಾರಣ ದೇವಭಯ ಮತ್ತು ಆತ್ಮ ನಿಯಂತ್ರಣದ ಕೊರತೆಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ರಂಜಾನ್ ಉಪವಾಸವು ಮನುಷ್ಯನಿಗೆ ದೇವಭಯ ಮತ್ತು ಆತ್ಮ ನಿಯಂತ್ರಣದ ಮಹತ್ವವನ್ನು ಕಲಿಸುವ ಒಂದು ತರಬೇತಿಯಾಗಿದೆ. ಅಲ್ಲದೆ ರಂಜಾನ್ ತಿಂಗಳು ಕರುಣೆ, ಸಹನೆ ಹಾಗೂ ಸಮೃದ್ಧಿಯ ಸಂದೇಶವನ್ನು ನೀಡುವ ಪವಿತ್ರ ತಿಂಗಳಾಗಿದೆ ಎಂದು ಹೇಳಿದರು. ಇಂತಹ ಸೌಹಾರ್ದ ಕಾರ್ಯಕ್ರಮಗಳು ಸಮಾಜದ ನಡುವೆ ಇರುವ ಅಂತರವನ್ನು ಕಡಿಮೆ ಮಾಡಿ ಪರಸ್ಪರ ಪ್ರೀತಿ ಮತ್ತು ಸಾಮರಸ್ಯದ ಸೇತುವೆ ನಿರ್ಮಿಸಲು ಸಹಕಾರಿಯಾಗಲಿ ಎಂದು ಅವರು ಆಶಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 100ಕ್ಕೂ ಹೆಚ್ಚು ಸರ್ವಧರ್ಮದ ಸಹೋದರಿಯರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಅಲ್ಲಾಹನ ಕೃಪೆಯಿಂದ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಜರುಗಿತು.

## ಗ್ರಾಮ ಒನ್ ಕೇಂದ್ರಗಳ ಸ್ಥಾಪನೆಗೆ ಅರ್ಜಿ ಆಹ್ವಾನ


ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳನ್ನು ಒಂದೇ ಸೂರಿನಡಿ ಜನರಿಗೆ ಒದಗಿಸುವ ಉದ್ದೇಶದಿಂದ ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಲಿರುವ ಗ್ರಾಮ-1 ಫ್ರಾಂಚೈಸಿ ಕೇಂದ್ರಗಳನ್ನು ಸ್ಥಾಪಿಸಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.**




ಸಾರ್ವಜನಿಕರು ತಮ್ಮ ಸಮೀಪದಲ್ಲೇ ಸರ್ಕಾರದ ಅನೇಕ ಸೇವೆಗಳನ್ನು ಸುಲಭವಾಗಿ ಪಡೆಯಲು ರಾಜ್ಯ ಸರ್ಕಾರದ ನೂತನ ಯೋಜನೆಗಳನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ವೆಬ್‌ಸೈಟ್ ವಿಳಾಸ: https://sevasindhuservices.karnataka.gov.in/directApply.do-serviceld=2631 ಮೂಲಕ ಮಾರ್ಚ್ 15ರೊಳಗಾಗಿ ಸಲ್ಲಿಸಬಹುದಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿಕ್ಷಣದಿಂದ ಮಹಿಳಾ ಸಬಲೀಕರಣ :ಚಂದ್ರಮತಿ ಅಲ್ದಾಳ



ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಕರಡಿಗುಡ್ಡ ಗ್ರಾಮದಲ್ಲಿ ಶ್ರೀ ವೆಂಕಟೇಶ್ವರ ಪದವಿ ಮಹಾವಿದ್ಯಾಲಯದ ವತಿಯಿಂದ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದ 4 ನೇ ದಿನದ ಕಾರ್ಯಕ್ರಮದಲ್ಲಿ ಚಂದ್ರಮತಿ ಅಲ್ದಾಳ ಕನ್ನಡ ಉಪನ್ಯಾಸಕರು ವಿಶೇಷ ಉಪನ್ಯಾಸ ನೀಡಿ ಶಿಕ್ಷಣದಿಂದ ಮಹಿಳಾ ಸಬಲೀಕರಣ ಕುರಿತು ಮಾತನಾಡಿ ಇಂದಿನ ವ್ಯವಸ್ಥೆಯಲ್ಲಿ ಪುರುಷ ಪ್ರಧಾನ ರಾಷ್ಟ್ರ ಎಂದು ಹೇಳುತ್ತಿದ್ದಾರೆ ಅದು ತಪ್ಪು ಇದು ಮಹಿಳಾ ಪ್ರಧಾನ ರಾಷ್ಟ್ರವಾಗಿದೆ.**

ಹೇಗೆಂದರೆ ಪ್ರತಿಯೊಂದು ಮಹಿಳೆಯರು ಪಂಚಾಯತ ಮಟ್ಟದಿಂದ ಅಧಿಕಾರಿಯಾಗಿ ಪೈಲೆಟ್ ವರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ಸಪಲತೆಯನ್ನು ಹೊಂದಬೇಕಾದರೆ ಪ್ರತಿಯೊಬ್ಬರೂ ಶಿಕ್ಷಣ ಪಡೆದುಕೊಳ್ಳಬೇಕು. ಮಹಿಳೆಯರಿಗೆ ತವರು ಮನೆ ಸಂಸ್ಕಾರವಿರಬೇಕು ಮತ್ತು ಗಂಡನ ಮನೆ ಸಹಕಾರವಿರಬೇಕು ಎಂದುಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಶರಣಬಸವ ಕರಡಿಗುಡ್ಡ ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಇಂದಿನ ಯುಗದಲ್ಲಿ ತಂತ್ರಜ್ಞಾನದ ಮಹತ್ವ ತುಂಬಾ ಪ್ರಯೋಜನವಾಗಿದೆ ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಶಂಕ್ರಪ್ಪ ಅಂಗಡಿ ಮಾತನಾಡಿದರು.ಊರಿನ ಮುಖಂಡರಾದ ರಾಘವೇಂದ್ರ ನಾಯಕ ಪ್ರಾಧ್ಯಪಕರು, ಪ್ರಾಣೇಶ ಗೌಡ ಜಿ. ಊರುಕುಂದ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ರೈತ ಸಂಘ,ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಗಳಾದ ಆಂಜನೇಯ ನಸಲಾಪುರ. ಚಂದ್ರಶೇಖರ ಎಚ್ ಸಹಾಯಕ ಪ್ರಾಧ್ಯಪಕರು. ಡಾ. ಹುಲಿಯಪ್ಪ ದುಮತಿ ಸಹಾಯಕ ಪ್ರಾಧ್ಯಪಕರು ಕಾಲೇಜಿನ ಉಪನ್ಯಾಸಕರಾದ ಅಂಬಣ್ಣ ನಾಯಕ, ಶೈಲಜಾ , ರೇಣುಕಾ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಮತ್ತು ಶಿಬಿರಾರ್ಥಿಗಳು ಗ್ರಾಮಸ್ಥರು ಭಾಗವಹಿಸಿದ್ದರು. ಎನ್.ಎಸ್.ಎಸ್ ಗೀತೆಯನ್ನು ಹುಲಿಗೆಮ್ಮ ಸಂಗಡಿಗರು ಹಾಡಿದರು. ಸುಧಾ ನಿರೂಪಿಸಿದರು, ಶಿವಬಸಮ್ಮ ಸ್ವಾಗತಿಸಿದರು, ಯಲ್ಲಮ್ಮ ವಂದಿಸಿದರು.

# ಶ್ರೀಶೈಲ ಮಲ್ಲಿಕಾರ್ಜುನ ದರ್ಶನಕ್ಕೆ ಅನಂತ ಭಕ್ತರ ಪಯಣ

ನೈಜ್ಯ ದೆಸೆ ನ್ಯೂಸ್

**ಬೆಳಗಾವಿ-ರಾಯಚೂರ ಹೆದ್ದಾರಿಯಲ್ಲಿ ಈಗ ಶ್ರೀಶೈಲ ಮಲ್ಲಯ್ಯನ ದರ್ಶನಕ್ಕೆ ಹೊರಟ ಪಾದಯಾತ್ರಿಗಳ ದಂಡೇ ಕಾಣಸಿಗುತ್ತದೆ. ಬೆಳಗಾವಿ, ವಿಜಯಪುರ, ಬಾಗಲಕೋಟೆ ಜಿಲ್ಲೆಗಳ ಜನ ಕಡು ಬಿಸಿಲನ್ನು ಲೆಕ್ಕಿಸದೇ ಪಾದಯಾತ್ರೆ ಮೂಲಕ ಶ್ರೀಶೈಲ ಮಲ್ಲಿಕಾರ್ಜುನ ದರ್ಶನಕ್ಕೆ ಹೆಜ್ಜೆ ಹಾಕುತ್ತಿದ್ದಾರೆ. ಸೋಮವಾರ ಸಂಜೆಯಿಂದಲೇ ಪಾದಯಾತ್ರೆ ಆರಂಭಿಸಿರುವ ಭಕ್ತರು ಶುಕ್ರವಾರ ಇಳಿ ಹೊತ್ತಿಗೆ ಬಾಗಲಕೋಟೆ ಜಿಲ್ಲೆಯ ಗಡಿಯನ್ನು ದಾಟಿ ರಾಯಚೂರು ಜಿಲ್ಲೆಯನ್ನು ಪ್ರವೇಶಿಸುತ್ತಾರೆ.**



ಪ್ರತಿವರ್ಷ ಯುಗಾದಿಯಂದು ಜರುಗುವ ಶ್ರೀಶೈಲ ಮಲ್ಲಿಕಾರ್ಜುನನ ಜಾತ್ರೆಗೆ ಅಪಾರ ಸಂಖ್ಯೆಯ ಭಕ್ತರು ಈ ಭಾಗದಿಂದ ತೆರಳುತ್ತಿದ್ದು, ಈ ವರ್ಷ ಪಾದಯಾತ್ರಿಗಳ ಸಂಖ್ಯೆ ಮತ್ತಷ್ಟು ಹೆಚ್ಚಾಗುತ್ತಿದೆ ಎನ್ನಲಾಗಿದೆ. 6-7 ನೇ ತರಗತಿ ಓದುತ್ತಿರುವ ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೂ ಪಾದಯಾತ್ರೆ ತೆರಳುತ್ತಿರುವ ದೃಶ್ಯಗಳು ಕಂಡುಬರುತ್ತಿವೆ. 30-40 ವರ್ಷಗಳಿಂದಲೂ ಪಾದಯಾತ್ರೆ ತೆರಳುತ್ತಿರುವ ಭಕ್ತರು 'ನಡೆಯುವ ಶಕ್ತಿ ಇರುವವರೆಗೂ ಮಲ್ಲಯ್ಯನ ದರ್ಶನಕ್ಕೆ ಹೋಗುತ್ತೇವೆ' ಎನ್ನುತ್ತಾರೆ. ಏನೂ ತೊಂದರೆ ಆಗೋದಿಲ್ಲ. ಮಲ್ಲಯ್ಯನ ಕೃಪೆಯಿಂದ ಸರಳ ರೀತಿಯಲ್ಲಿ ಶ್ರೀಶೈಲ ತಲುಪಿ ದರ್ಶನ ಪಡೆಯುತ್ತೇವೆ ಎಂದು ವಯೋವೃದ್ಧ ಮಹಿಳೆಯರು ಹೇಳಿದರು.

'ಸಾವಿರಾರು ಜನ ನಡೆದು ಹೋಗುತ್ತಿದ್ದು ಎಲ್ಲರಿಗೂ ಊಟ, ಉಪಹಾರ, ವಿಶ್ರಾಂತಿಗೆ ವ್ಯವಸ್ಥೆ, ಸ್ನಾನಕ್ಕೆ ಬಿಸಿ ನೀರು, ಹಣ್ಣು-ಹಂಪಲ, ಉಚಿತ ಆರೋಗ್ಯ ಸೇವೆ ಹೀಗೆ ಎಲ್ಲದರ ಸೇವೆ ಮಾಡುತ್ತಿರುವ ಪ್ರತಿ ಊರಿನ ಜನರೇ ನಿಜವಾದ ಶ್ರೀಶೈಲ ಮಲ್ಲಯ್ಯನ ಭಕ್ತರು. ಅವರ ಸೇವೆ ಸ್ಮರಣೀಯ ಎನ್ನುತ್ತಾರೆ' ಗೋಕಾಕದ ಪಾದಯಾತ್ರಿ ಮಲ್ಲಪ್ಪ. ಶಿರೂರಿನ ಸ್ಮರಣೀಯ ಸೇವೆ: ಬಾಗಲಕೋಟೆ ತಾಲ್ಲೂಕಿನ ಶಿರೂರ ಪಟ್ಟಣದಲ್ಲಿ ಕಳೆದ 15 ವರ್ಷಗಳಿಂದ ಶ್ರೀಶೈಲ ಪಾದಯಾತ್ರಿಗಳಿಗೆ ಸ್ಮರಣೀಯ ಸೇವೆ ಜರುಗುತ್ತಿದೆ. ಮೂರು ದಿನಗಳ ಕಾಲ ಬೆಳಿಗ್ಗೆ ಸ್ನಾನಕ್ಕೆ ಬಿಸಿನೀರು, ಚಹಾ, ಉಪಾಹಾರ, ಆರೋಗ್ಯವರ್ಧಕ ಹುರುಳಿ ಸಂಗಟಿ, ಕಡಕ್ ರೊಟ್ಟಿ, ಮೊಸರು, ಶೇಂಗಾ ಚಟ್ನಿ, ಬದನೇಕಾಯಿ, ಹೆಸರು ಮತ್ತು ಕಡ್ಲಿಕಾಳು ಪಲ್ಲ್ಯೆ, ಅನ್ನ, ಸಾರು, ಮಜ್ಜಿಗೆಯ ಸೇವೆ ನಿರಂತರವಾಗಿ ಸಾಗುತ್ತಿದೆ. ಜೊತೆಗೆ ಯಾತ್ರೆಯಿಂದ ಸುಸ್ತಾಗಿ ದಣಿದಿರುವ ಭಕ್ತರ ಕಾಲುಗಳಿಗೆ ಎಣ್ಣೆ ಹಚ್ಚಿ ಮಸಾಜ್ ಮಾಡಿ ಚೈತನ್ಯ ತುಂಬುವ ಸೇವೆಯನ್ನು ಪಟ್ಟಣದ ಯುವಕರು ಮಾಡುತ್ತಿದ್ದು, ಉಚಿತ ಆರೋಗ್ಯ ಸೇವೆ, ಔಷಧ, ಮಾತ್ರೆ ವಿತರಣೆಯೂ ನಡೆಯುತ್ತಿದೆ.

ಇದರೊಟ್ಟಿಗೆ ದಾರಿಯುದ್ದಕ್ಕೂ ಅನೇಕ ಕಡೆ ಮಜ್ಜಿಗೆ, ಕುಡಿಯುವ ನೀರು, ದ್ರಾಕ್ಷಿ, ಕಲ್ಲಂಗಡಿ, ಬಾಳೆ ಹಣ್ಣು ವಿತರಣೆ, ಕಮತಗಿ, ಅಮೀನಗಡದಲ್ಲಿ ಉದರ ಸಜ್ಜಕ, ಹೋಳಿಗೆ ಊಟದ ಪ್ರಸಾದವೂ ಭಕ್ತರಿಗೆ ಸಿಗುತ್ತದೆ. ರಾಯಬಾಗ ತಾಲ್ಲೂಕಿನ ಸವಸುದ್ದಿ ಗ್ರಾಮದ ಹತ್ತಾರು ಜನ ಯುವಕರ ತಂಡವೊಂದು ಶಿರೂರ ಬಳಿ ಪ್ರತಿವರ್ಷ ತಮ್ಮೂರಿನಿಂದ 13 ಟನ್ ಕಬ್ಬು ತಂದು ಹಾಲು ತಯಾರಿಸಿ ಸೇವೆ ಮಾಡುತ್ತಿದ್ದಾರಲ್ಲದೇ, ಅದೇ ಗ್ರಾಮದ ಮುತ್ನಾಳ ಕುಟುಂಬದವರು ಟನ್ ಗಟ್ಟಲೆ ಬಾಳೆಹಣ್ಣು ಹಾಗೂ 1,500ಕ್ಕೂ ಹೆಚ್ಚು ಕುಡಿಯುವ ನೀರಿನ ಬಾಟಲ್ ವಿತರಣೆಯ ಸೇವೆ ಮಾಡುತ್ತಿದ್ದಾರೆ.

## ಕಲ್ಮಲಾ ವ್ಯಾಪ್ತಿಯಲ್ಲಿ ಮಾರ್ಚ್ 9ರಂದು ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಯ 33/11 ಕೆವಿ ಕಲ್ಮಲಾ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಮಾರ್ಚ್ 09ರ ಬೆಳಿಗ್ಗೆ 10ಗಂಟೆಗೆ ಯಿಂದ ಸಂಜೆ 5ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು,**




ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೊಲೆ ಆರೋಪಿಗೆ ಜೀವಾವಧಿ ಶಿಕ್ಷೆ ಮತ್ತು 50 ಸಾವಿರ ದಂಡ ವಿಧಿಸಿದ ನ್ಯಾಯಾಲಯ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಮಾ 8 ಲಿಂಗಸಗೂರು ಪೋಲಿಸ್ ಠಾಣಾ ವ್ಯಾಪ್ತಿಯ ಯರಡೋಣ ನಿವಾಸಿ ವಿಜಯಲಕ್ಷ್ಮೀ @ ಗಿರಿಜಮ್ಮ ಗಂಡ ಸೋಮಪ್ಪ ಬಿಂಗಿ ಈಕೆಯು ತನ್ನ ಗಂಡ ಮೃತಪಟ್ಟ ನಂತರ ತನ್ನ ತಾಯಿಯ ತವರು ಮನೆಯಾದ ಯರಡೋಣ ಗ್ರಾಮದಲ್ಲಿ ವಾಸವಾಗಿದ್ದು,**




ಆರೋಪಿ ದೇವರಾಜ @ ದೇವಣ್ಣ ತಂದೆ ಯಲ್ಲಪ್ಪ ಅನ್ವರಿ ಸಾಕೀನ ಯರಡೋಣ ಈತನು ಆಕೆಯೊಂದಿಗೆ ಸಲುಗೆ ಬೆಳೆಸಿ ಅಕ್ರಮ ಸಂಬಂಧ ಹೊಂದಿದ್ದು ದಿನಾಂಕ:10-03-2024 ರಂದು ಅಮವಾಸ್ಯೆ ಇದ್ದ ಪ್ರಯುಕ್ತ ಆರೋಪಿಯು ಆಕೆಯೊಂದಿಗೆ ಛತ್ತರದ ಹನಮಪ್ಪ ದೇವರಿಗೆ ಹೋಗಿ ಮರಳಿ ಲಿಂಗಸಗೂರಿಗೆ ಬಂದು ಲಿಂಗಸಗೂರು ಬಸ್ ನಿಲ್ದಾಣದ ಹಿಂದೆ ಇರುವ ಹಳ್ಳದ ದಂಡೆಯ ಮೇಲೆ ಬೆಳೆದಿರುವ ಜಾಲಿಗಿಡಗಳ ಪೊದೆಯಲ್ಲಿ ಕರೆದು ಕೊಂಡು ಹೋಗಿ ವಿಜಯಲಕ್ಷ್ಮಿಗೆ ತನ್ನೊಂದಿಗೆ ಮಲಗುವಂತೆ ಒತ್ತಾಯಿಸಿದಾಗ ಆಕೆಯು ಈ ದಿನ ಅಮವಾಸ್ಯೆ ಇದೆ ಬೇಡ ಅಂತಾ ಹೇಳಿ ನಿರಾಕರಿಸಿದ್ದಕ್ಕೆ ಆರೋಪಿಯು ಕೊಲೆ ಮಾಡುವ ಉದ್ದೇಶದಿಂದ ಆಕೆಯ ಕಪಾಳಕ್ಕೆ ಹೊಡೆದು, ನೆಲಕ್ಕೆ ಕೆಡವಿ ಕಲ್ಲಿನಿಂದ ಬಲ ಮಲಕಿಗೆ ಹೊಡೆದು ರಕ್ತ ಗಾಯಗೊಳಿಸಿ ಆಕೆಯು ಹುಟ್ಟುಕೊಂಡ ಸೀರೆಯಿಂದ ಕುತ್ತಿಗೆಗೆ ಬಿಗಿದು ಕೊಲೆ ಮಾಡಿರುತ್ತಾನೆಂದು ಪೊಲೀಸ್ ಠಾಣೆ ಯಲ್ಲಿ ಪ್ರಕರಣ ದಾಖಲಾದ ಹಿನ್ನಲೆಯಲ್ಲಿ ಈ ಪ್ರಕರಣದ ತನಿಖೆಯನ್ನು ಅಂದಿನ ತನಿಖಾಧಿಕಾರಿಗಳಾದ ಪುಂಡಲಿಕ ಪಟತ್ತಾರ ಸಿಪಿಐ ಇವರು ಪ್ರಕರಣದ ತನಿಖೆ ಕೈಗೊಂಡು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದು, ವಾದ ವಿವಾದಗಳನ್ನು ಆಲಿಸಿದ 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಲಯ ರಾಯಚೂರು, ಪೀಠಾಸಿನ ಲಿಂಗಸಗೂರು ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಬಿ ಜಕಾತಿ ರವರು ದಿನಾಂಕ:07-03-2026 ರಂದು ಆರೋಪಿಗೆ ಜೀವಾವಧಿ ಕಾರಾಗೃಹ ಶಿಕ್ಷೆ ಹಾಗೂ ರೂ.50,000/- ದಂಡ ವಿಧಿಸಿ ತೀರ್ಪು ನೀಡಿದ್ದಾರೆ . ಸರ್ಕಾರದ ಪರವಾಗಿ ಮಂಜುನಾಥ ಬೇರ್ಗಿ (ಹುಳ್ಳಿಹಾಳ್) ಸರ್ಕಾರಿ ಅಭಿಯೋಜಕರು, ಲಿಂಗಸಗೂರು ರವರು ವಾದ ಮಂಡಿಸಿದ್ದು ಹಾಗೂ ನಿಂಗಯ್ಯ ಪಿ ಸಿ ರವರು ಸಾಕ್ಷಿದಾರರನ್ನು ಸರಿಯಾದ ಸಮಯಕ್ಕೆ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತಾರೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂಗನವಾಡಿ ಕಾರ್ಯಕರ್ತೆಯರ ಸೇವೆ ಶ್ಲಾಘನೀಯ: ಹವಾಲ್ದಾರ್

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಮಗುವಿಗೆ ಜನ್ಮ ಕೊಟ್ಟ ಒಬ್ಬ ತಾಯಿಯ ಜವಾಬ್ದಾರಿ ಎಷ್ಟಿರುತ್ತದೆಯೋ ಅಷ್ಟೇ ಜವಾಬ್ದಾರಿಯನ್ನು ಅಂಗನವಾಡಿಯಲ್ಲಿ ಕಾರ್ಯ ನಿರ್ವಹಿಸುವ ಮಾತೆಯರು ಹೊಂದಿದ್ದು, ಮಗು ಹುಟ್ಟಿದ ಎರಡು ವರ್ಷಗಳ ನಂತರ ತಾಯಿಗಿಂತ ಹೆಚ್ಚಿನ ಲಾಲನೆ ಪಾಲನೆ ಆರೈಕೆಗಳ ಜವಾಬ್ದಾರಿಯನ್ನು ಹೊತ್ತು ಮಗುವಿನ ಶಾರೀರಿಕ ಮತ್ತು ಬೌದ್ಧಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಪೀಸ್ ಇಂಟರ್ನ್ಯಾಷನಲ್ ಶಾಲೆಯ ಮುಖ್ಯಗುರುಗಳಾದ ಚಾಂದಪಾಶಾ ಹವಾಲ್ದಾರ ಹೇಳಿದರು.**



ಗ್ರಾಮದ ಸರಕಾರಿ ಉರ್ದು ಪ್ರಾಥಮಿಕ ಶಾಲೆಯಲ್ಲಿ ನಡೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಜಯಪುರ, ಶಿಶು ಅಭಿವೃದ್ಧಿ ಯೋಜನೆ ಸಿಂದಗಿ ಹಾಗೂ ಅಜೀಂ ಪ್ರೇಮ್ಜಿ ಫೌಂಡೇಶನ್ ವಿಜಯಪುರ ಅವರ ಸಹಯೋಗದಲ್ಲಿ ಕಲಕೇರಿ ವಲಯ ಮಟ್ಟದ ಬಾಲಮೇಳ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಗ್ರಾಪಂ ಸದಸ್ಯರಾದ ನಬಿಲಾಲ ನಾಯ್ಕೋಡಿ ಮತ್ತು ಸುಧಾಕರ ಅಡಕಿ ಅವರು ಮಾತನಾಡಿ ಪ್ರತಿಯೊಂದು ಮಗುವಿಗೆ ಆಟದೊಂದಿಗೆ ಪಾಠವನ್ನು ಕಲಿಸುತ್ತಾ ಅವರ ಹಸಿವನ್ನು ನೀಗಿಸುವ ತಮ್ಮ ಕರ್ತವ್ಯದೊಂದಿಗೆ.

ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಅಂಗನವಾಡಿಯ ಶಿಕ್ಷಕಿಯರ ಬದುಕಿನ ಚಿಂತನೆಯನ್ನು ಸರಕಾರ ಮತ್ತು ಸಮಾಜ ಮಾಡಬೇಕಾದ ಅವಶ್ಯಕತೆಯಿದ್ದು, ಈ ನಿಟ್ಟಿನಲ್ಲಿ ಸರಕಾರ ಅವರ ಗೌರವಧನವನ್ನು ಹೆಚ್ಚಿಸುವ ನಿರ್ಧಾರ ಮಾಡಬೇಕಿದೆ ಎಂದು ಹೇಳಿದರು. ಕಲಕೇರಿ ಭಾಗದ ಒಟ್ಟು 11 ಅಂಗನವಾಡಿಯ ಮಕ್ಕಳಿಗಾಗಿ ಏರ್ಪಡಿಸಿದ ಬಾಲಮೇಳ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕಲಿಕಾ ಮತ್ತು ಪ್ರತಿಭಾ ಚಟುವಟಿಕೆಗಳಲ್ಲಿ ಅತ್ಯಂತ ಸಂಭ್ರಮದಿಂದ ಪಾಲ್ಗೊಂಡು ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಇದೇ ವೇಳೆ ಸಮಾಜ ಸೇವಕರಾದ ಭಾಗ್ಯವಂತ ಮೋಪಗಾರ ಅವರು ಎಲ್ಲ ಅಂಗನವಾಡಿ ಮಕ್ಕಳಿಗೆ ಉಚಿತವಾಗಿ ಬಟ್ಟೆಯನ್ನು ವಿತರಿಸಿದರು. ಮತ್ತು ಗ್ರಾಮ ಪಂಚಾಯತ ಸದಸ್ಯರಾದ ಸುಧಾಕರ ಅಡಕಿ ಅವರು ವಿದ್ಯಾರ್ಥಿ ಗಳಿಗೆ 20 ಡಜನ್ ನೋಟ್ಬುಕ್ ಮತ್ತು ಪೆನ್ ವಿತರಿಸಿದರು.

ಇದೇ ವೇಳೆ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು ಮತ್ತು ವಿಶೇಷವಾಗಿ ಮಕ್ಕಳಿಗಾಗಿಯೇ 20ಕ್ಕೂ ಹೆಚ್ಚು ವಿವಿಧ ಬಗೆಯ ಪ್ರದರ್ಶನಾ ಸ್ಟಾಲ್ಗಳನ್ನು ಹಾಕುವ ಮೂಲಕ ಮಕ್ಕಳ ಗಮನ ಸೆಳೆಯುವ ವಿವಿಧ ಬಗೆಯ ವಸ್ತುಗಳನ್ನು ಪ್ರದರ್ಶನ ಮಾಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಇಲಾಖೆಯ ವಲಯ ಮೇಲ್ವಿಚಾರಕರಾದ ಎ.ಎಮ್.ಸಜ್ಜನ ಅವರು ವಹಿಸಿದ್ದರು, ಅತಿಥಿಗಳಾಗಿ ಸಿಂದಗಿ ವಿಭಾಗದ ಮೇಲ್ವಿಚಾರಕರಾದ ಲಕ್ಷ್ಮೀ ನಾಟೀಕಾರ, ಎ.ಪಿ.ಕುಂಬಾರ, ಸುನಿತಾ ಕಪ್ಪೆನವರು, ಶೈಲಜಾ ಪಾಟೀಲ, ಜಯಶ್ರೀ ದೊಡಮನಿ, ಎ.ಆರ್. ಚವ್ಹಾಣ, ಪ್ರಮೋದ ಮತ್ತು ಕಲಕೇರಿ ಗ್ರಾಪಂ ಕಾರ್ಯದಶರ್?ಗಳಾದ ಸಿದ್ದಯ್ಯ ಸ್ಥಾವರಮಠ, ಮುಖ್ಯಗುರುಗಳಾದ ಜೆ.ಬಿ.ಕುಲಕಣರ್?, ಶಿವಕುಮಾರ ಪಟ್ಟಣಶೆಟ್ಟಿ, ಯುನೂಸ್ ಚೌದ್ರಿ, ಡಾ.ನವೀನಶಂಕರ ವೈದ್ಯಾಧಿಕಾರಿಗಳು, ಉಪ್ಪಾರ ಸಮಾಜದ ಮುಖಂಡರಾದ ಭಾಗ್ಯವಂತ ಮೋಪಗಾರ, ಆಬೀದ ಇನಾಮದಾರ, ಸಂಜೀವ ಉತಾಳೆ ಸೇರಿದಂತೆ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಹಾಗೂ ಕಿಶೋರಿಯರು, ಆಶಾ

# ನೇಮಕಾತಿ ಪ್ರಕಟಣೆ

ಏಖಖಖಐಕಖ ನೇಮಕಾತಿ 2026–3 ಬ್ಲಾಕ್ ಮ್ಯಾನೇಜರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ KSRLPS ನೇಮಕಾತಿ 2026: 3 ಬ್ಲಾಕ್ ಮ್ಯಾನೇಜರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಪ್ರಚಾರ ಸಂಘವು ಮಾರ್ಚ್ 2026 ರ KSRLPS ಅಧಿಕೃತ ಅಧಿಸೂಚನೆಯ ಮೂಲಕ ಬ್ಲಾಕ್ ಮ್ಯಾನೇಜರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಯಾದಗಿರಿ ? ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 11–ಮಾರ್ಚ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 25–02–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 11–ಮಾರ್ಚ್–2026 ಅಧಿಕೃತ ವೆಬ್‌ಸೈಟ್: ksrlps.karnataka.gov.in

# ಹೆರಿಗೆ ನಂತರ ಮುಂದಿನ ಮಗುವಿನ ಜನನಕ್ಕೆ ಕನಿಷ್ಠ 3 ವರ್ಷಗಳ ಅಂತರವಿರಲಿ :ಡಾ ಲಕ್ಷ್ಮಿಕಾಂತಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಯಿ ಮಕ್ಕಳ ಆರೋಗ್ಯ ಕಾಪಾಡುವ ಸಾಮಾಜಿಕ ಜವಾಬ್ದಾರಿಯನ್ನು ಪ್ರತಿಯೊಬ್ಬರು ನಿರ್ವಹಿಸಲು ಹಾಗೂ ಚಿಕ್ಕ ಕುಟುಂಬ ಹೊಂದುವ ಮೂಲಕ ಜನಸಂಖ್ಯೆಯನ್ನು ನಿಯಂತ್ರಣಕ್ಕಾಗಿ ಹೆರಿಗೆ ನಂತರ ಎರಡನೆಯ ಮಗುವಿನ ಜನನದ ಮಧ್ಯ ಕನಿಷ್ಟ 03 ವರ್ಷಗಳ ಅಂತರವಿಡಲು ಅಂತರ ಚುಚ್ಚುಮದ್ದು ಸೇರಿದಂತೆ ಉಚಿತ ತಾತ್ಕಾಲಿಕ ವಿಧಾನಗಳ ಬಳಕೆಗೆ ದಂಪತಿಗಳು ಸ್ವಯಂ ಪ್ರೇರಣೆಯಿಂದ ಮುಂದೆ ಬರಲು ದಡೆಸೂಗೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಲಕ್ಷ್ಮಿಕಾಂತಿ ತಿಳಿಸಿದರು.**




ಸಾರ್ವಜನಿಜರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಡಿಯಲ್ಲಿರುವ ಯೋಜನೆ, ಸೇವೆಗಳ ಕುರಿತು ಆರೋಗ್ಯ ಶಿಕ್ಷಣವನ್ನು ಮನೆ ಬೇಟಿ ಮೂಲಕ ನೀಡುವ ದಿಶೆಯಲ್ಲಿ ಬಾಣಂತಿ, ಗರ್ಭಿಣಿಯರ ಮನೆಗಳ ಬೇಟಿ ಮಾಡಿ ಮಾತನಾಡುತ್ತಾ ಹೆ–ರಿಗೆ ನಂತರ ಅತ್ಯಂತ ಸರಳವಾದ ಹಾಗೂ ಮೂರು ತಿಂಗಳಿಗೊಮ್ಮೆ ಒಂದು ಬಾರಿ ಇಂಜೆಕ್ಷನ್ ರೂಪದಲ್ಲಿ ಪಡೆಯುವ "ಅಂತರ" ಚುಚ್ಚುಮದ್ದು ಅತ್ಯಂತ ಸರಳ, ಸುಲಭವಾಗಿದ್ದು ದಡೆಸೂಗೂರು ಪ್ರಾಥಮಿಕ ಆರೋಗ್ಯ ಕೇಂದ್ರ ಸೇರಿದಂತೆ ಎಲ್ಲ ಆಸ್ಪತ್ರೆಗಳಲ್ಲಿ ಉಚಿತವಾಗಿ ದೊರಕುತ್ತದೆ. ಅಲ್ಲದೆ ಮಾಲಾ–ಎನ್, ನುಂಗುವ ಗುಳಿಗೆ, ಛಾಯಾ ಮಾತ್ರೆಗಳು ಹಾಗೂ ಐಯುಸಿಡಿ (ವಂಕಿ) ಅಳವಡಿಕೆಯ ಸದುಪಯೋಗ ಪಡೆಯಲು ತಿಳಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ ಮಾತನಾಡಿ, ಬಾಲ್ಯವಿವಾಹ ತಡೆಗಾಗಿ ಹೆಣ್ಣು ಮಕ್ಕಳಿಗೆ 18 ವರ್ಷಗಳು ತುಂಬಿದ ನಂತರ ಮದುವೆ ಮಾಡುವುದಕ್ಕೆ ಆಧ್ಯತೆ ನೀಡಬೇಕು. ಇದರಿಂದ ಗರ್ಭಿಣಿಯಾದಾಗ ಮಗುವು ಪರಿಪೂರ್ಣವಾಗಿ ಬೆಳೆಯಲು ಸಾಧ್ಯವಾಗುವುದಲ್ಲದೆ, ಸುರಕ್ಷಿತ ತಾಯ್ತನ, ಮಗುವಿನ ಲಾಲನೆ ಪಾಲನೆಗೆ ಸಹಕಾರಿಯಾಗುವುದು. ಮುಖ್ಯವಾಗಿ ಗರ್ಭಿಣಿಯೆಂದು ತಿಳಿದ ದಿನದಿಂದಲೆ ವೈದ್ಯರ ಸಲಹೆಯಂತೆ ಪ್ರತಿ ತಿಂಗಳು ತಪಾಸಣೆ ಮಾಡಿಸಬೇಕು, ಟಿಡಿ ಚುಚ್ಚುಮದ್ದು ಹಾಕಿಸಬೇಕು, ಕನಿಷ್ಟ 180 ಕಬ್ಬಿಣಾಂಶ ಮಾತ್ರೆಗಳನ್ನು ಪ್ರತಿದಿನ ಒಂದರಂತೆ ಸೇವಿಸಿ ದಿನನಿತ್ಯದ ಆಹಾರದಲ್ಲಿ ಕಾಯಿಪಲ್ಯೆ, ತರಕಾರಿ, ಹಸಿರು ತಪ್ಪಲು ಪಲ್ಯ, ಕಾಳುಗಳು ಸೇರಿದಂತೆ ಪೌಷ್ಟಿಕಾಹಾರ ಸೇವಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಾಥಮಿಕ ಅರೋಗ್ಯ ಸುರಕ್ಷಣಾಧಿಕಾರಿ ಸುನೀತಾ, ಔಷಧಿ ಅಧಿಕಾರಿ ಪದ್ಮಾವತಿ, ಪ್ರಯೊಗಶಾಲಾ ತಂತ್ರಜ್ಞರಾದ ಪ್ರಲ್ಹಾದ್ ರೆಡ್ಡಿ, ವಾಣಿಶ್ರೀ, ನೀಲಮ್ಮ, ಮೆಹತಾಬ್ ಬಾನು, ಮೇಘರಾಜ್, ಆಶಾ ಕಾರ್ಯಕರ್ತೆಯರಾದ ಶೋಭಾ, ಶಾಂಭವಿ, ಬಸಮ್ಮ ಸೇರಿದಂತೆ ತಾಯಂದಿರು ಉಪಸ್ಥಿತರಿದ್ದರು.

# ಕ್ಯಾನ್ಸರ್ ಆಸ್ಪತ್ರೆ, ತಂತ್ರಜ್ಞಾನ ಕೇಂದ್ರ ಘೋಷಣೆ

ನೈಜ್ಯ ದೆಸೆ ನ್ಯೂಸ್

**ಕೊಪ್ಪಳ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಿದ ಬಜೆಟ್‌ನಲ್ಲಿ ಜಿಲ್ಲೆಗೆ ಕೆಲ ಹೊಸ ಯೋಜನೆಗಳನ್ನು ಘೋಷಿಸಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಹಿಂದಿನ ಬಜೆಟ್‌ಗಳಲ್ಲಿ ಘೋಷಿಸಲಾಗಿದ್ದ ಹಳೆಯ ಯೋಜನೆಗಳನ್ನೇ ಮರು ಪ್ರಸ್ತಾಪಿಸಿದ್ದಾರೆ.**



ಬಜೆಟ್ ಪೂರ್ವದಲ್ಲಿ ಶಾಸಕ ರಾಘವೇಂದ್ರ ಹಿಟ್ನಾಳ ತಿಳಿಸಿದಂತೆ ಮುನಿರಾಬಾದ್–ಟಿಬಿ ಡ್ಯಾಂನಲ್ಲಿ ತೃತೀಯ ಹಂತದ ಕ್ಯಾನ್ಸರ್ ಆರೈಕೆ ಒದಗಿಸಲು ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆಗೆ ಒಪ್ಪಿಗೆ ನೀಡಲಾಗಿದ್ದು, ಜಿಟಿಟಿಸಿ–ಎಂ–ಎಸ್‌ಡಿಸಿಯಲ್ಲಿ ಟಾಯ್ ಕ್ಲಸ್ಟರ್ ಕೈಗಾರಿಕೆಯ ಕಾರ್ಯತಂತ್ರದ ಸಹಯೋಗದಲ್ಲಿ 20ಕೋಟಿ ವೆಚ್ಚದಲ್ಲಿ ತಂತ್ರಜ್ಞಾನ ಕೇಂದ್ರ ಸ್ಥಾಪನೆಯಾಗಲಿದ್ದು, ಇದು ಜಿಲ್ಲೆಯ ಪ್ರಗತಿಗೂ ಪೂರಕವಾಗಲಿದೆ. ತುಂಗಭದ್ರಾ ಜಲಾಶಯದಲ್ಲಿ ಶಿಥಿಲಗೊಂಡಿರುವ 33 ಕ್ರೆಸ್ಟ್‌ಗೇಟ್‌ಗಳನ್ನು ಬದಲಾಯಿಸಿ ಹೊಸ ಗೇಟ್‌ಗಳನ್ನು ಅಳವಡಿಸುವ ಕಾರ್ಯವನ್ನು ಮುಂಗಾರು ಪೂರ್ವದಲ್ಲಿ ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿರುವ ಮುಖ್ಯಮಂತ್ರಿ ಅವರು ಜಲಾಶಯದಲ್ಲಿ ಹೂಳಿನ ಶೇಖರಣೆಯಿಂದ ಆಗಿರುವ ನೀರಿನ ಸಂಗ್ರಹಣಾ ಸಾಮಥ–ರ್ಯದ ಕೊರತೆಯನ್ನು ನೀಗಿಸಲು ಕನಕಗಿರಿ ತಾಲ್ಲೂಕಿನ ನವಲಿ ಬಳಿ ಸಮತೋಲನಾ ಜಲಾಶಯ ನಿರ್ಮಾಣ ಸೇರಿದಂತೆ ಪರ್ಯಾಯ ಮಾರ್ಗೋಪಯಾಗಳ ಕುರಿತು ಈಗಾಗಲೇ ಚಿಂತಿಸಲಾಗಿದೆ ಎಂದಿದ್ದಾರೆ. ಈ ಯೋಜನೆಯನ್ನು ಹಿಂದೆಯೇ ಘೋಷಿಸಿದ್ದರೂ ಈಗಲೂ ಕಾಗದಕ್ಕೆ ಸೀಮಿತವಾಗಿದೆ. ಅಂಜನಾದ್ರಿ ಬೆಟ್ಟವನ್ನು ವಿಶ್ವ ಪ್ರಸಿದ್ಧ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು 100 ಕೋಟಿ ವೆಚ್ಚದ ಯೋಜನೆ ರೂಪಿಸಲಾಗುವುದು ಎಂದು ಬಜೆಟ್‌ನಲ್ಲಿ ಹೇಳಿದ್ದರೂ ಈಗಾಗಲೇ ಅಂಜನಾದ್ರಿಗೆ ಬಿಜೆಪಿ ಹಾಗೂ ಕಾಂಗ್ರೆಸ್ ಸರ್ಕಾರಗಳು ತಮ್ಮ ಬಜೆಟ್‌ನಲ್ಲಿ ತಲಾ 100 ಕೋಟಿ ಘೋಷಣೆ ಮಾಡಿವೆ. ಕಾಮಗಾರಿಗಳು ಮಾತ್ರ 23 ಕೋಟಿಯಷ್ಟು ಆಗಿವೆ. ಯುನಸ್ಕೊ ಹಾಗೂ ವಿಶ್ವ ಪರಂಪರೆ ತಾಣದ ನಿಯಮಗಳ ಅಡ್ಡಿಗಳಿಂದ ಉಳಿದೆಡೆ ಕೆಲಸ ಕುಂಠಿತವಾಗಿದೆ. ಜಿಲ್ಲೆಗೆ ಪ್ರತ್ಯೇಕವಾಗಿ ಘೋಷಿಸಿರುವ ಯೋಜನೆಗಳು ಒಂದೆಡೆಯಾದರೆ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ರಾಜ್ಯ ಸರ್ಕಾರ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ಘೋಷಿಸಿರುವ ವಿಶೇಷ 5 ಸಾವಿರ ಕೋಟಿ ಮೊತ್ತದಲ್ಲಿಯೇ ಅಭಿವೃದ್ಧಿ ಯೋಜನೆಗಳಿಗೆ ಅನುದಾನವಿದೆ. ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ 1,668 ಅಂಗನವಾಡಿ ಕಟ್ಟಡ ನಿರ್ಮಿಸಲು ?200 ಕೋಟಿ ಘೋಷಿಸಿದ್ದು ಇದರಲ್ಲಿ ಜಿಲ್ಲೆಗೂ ಪಾಲು ಸಿಗಲಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಪ್ರೊ. ಎಂ.ಗೋವಿಂದರಾವ್ ಸಮಿತಿಯ ಶಿಫಾರಸುಗಳಿಗೆ ತಾತ್ವಿಕ ಅನುಮೋದನೆ ಕೊಟ್ಟಿರುವುದು ಅಭಿವೃದ್ಧಿಯ ವೇಗ ಹೆಚ್ಚಿಸಬಹುದು ಎನ್ನುವ ಭರವಸೆ ಮೂಡಿಸಿದೆ. ಮೂಲತಃ ಪ್ರಜಾವಾಣಿ ಮುದ್ರಣ ಆವೃತ್ತಿಯಿಂದ ಇದನ್ನು ಪಡೆಯಲಾಗಿದೆ. ಎಐ ನೆರವಿನ ವರ್ಗೀಕರಣದಿಂದಾಗಿ ವಿಭಾಗ ಮತ್ತು ಬಳಸಿರುವ ಪ್ರಾತಿನಿಧಿಕ ಚಿತ್ರ ತಪ್ಪಾಗಿರಬಹುದು. ಸುದ್ದಿಯ ವಿಷಯದಲ್ಲಿ ಯಾವುದೇ ಬದಲಾವಣೆ ಇಲ್ಲ 260307–35–1189842055

# ಮಿಣಜಗಿ ಸೌಹಾರ್ದ ಸಹಕಾರಿ ಸಂಘಕ್ಕೆ ಅವಿರೋಧ ಆಯ್ಕೆ





ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಸಮೀಪದ ಮಿಣಜಗಿ ಗ್ರಾಮದ ದಿ.ಮಿಣಜಗಿ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ,ಇದರ ಐದು ವರ್ಷದ ಅವಧಿಯ ಆಡಳಿತ ಮಂಡಳಿ(2026–31) ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಂಘದ 11 ಜನರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಹಾಗೂ ನಂತರ ನಡೆದ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಯ ಸಭೆಯಲ್ಲಿ ನಿರ್ದೇಶಕ ಎಂ.ಬಿ. ಬಾಗೇವಾಡಿ ಆಡಳಿತ ಮಂಡಳಿಯ ನೂತನ ಅಧ್ಯಕ್ಷರಾಗಿ ಮತ್ತು ಜಿ. ಎಸ್ ಬಿರಾದಾರ ಮಹಿಳಾ ನಿರ್ದೇಶಕರಾಗಿ ಸರ್ವಾನುಮತದಿಂದ ಮರು ಆಯ್ಕೆ ಆಗಿದ್ದಾರೆ.**

ಆಡಳಿತ ಮಂಡಳಿಗೆ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ಎಂ.ಬಿ.ಬಾಗೇವಾಡಿ ಅವರು ಮಾತನಾಡಿ ಸಂಘದ ಎಲ್ಲ ನಿರ್ದೇಶಕರು ನಮ್ಮಿಬ್ಬರ ಮೇಲೆ ಮೊದಲಿನಂತೆ ವಿಶ್ವಾಸವಿರಿಸಿ ಮತ್ತೇ ನಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ ಅವರ ವಿಶ್ವಾಸವನ್ನು ಉಳಿಸಿಕೊಂಡು ಎಲ್ಲರ ಸಹಕಾರದೊಂದಿಗೆ ಸಂಘವನ್ನು ಇನ್ನಷ್ಟು ಪ್ರಗತಿ ಪಥದತ್ತ ತೆಗೆದುಕೊಂಡು ಹೋಗಲು ಶಕ್ತಿ ಮೀರಿ ಪ್ರಯತ್ನಿಸುತ್ತೇವೆ ಎಂದರು. ಈ ಸಮಯದಲ್ಲಿ ಸಂಘದ ಆಡಳಿತ ಮಂಡಳಿಯ ನೂತನ ನಿರ್ದೇಶಕರಾದ ಬಿ.ಜಿ.ಬಿರಾದಾರ,–ಎಸ್. ಟಿ.ಯಾಳವಾರ,ಎಸ್.ಸಿ.ಬಿರಾದಾರ, ಬಿ.ಎಸ್.ಬಿರಾದಾರ, ಬಿ.ಜೆ.ಪೂಜಾರಿ,ಎಲ್.ಆರ್. ಚವ್ಹಾಣ, ಟಿ.ಜಿ.ಬಶೆಟ್ಟಿ, ಮಹಿಳಾ ನಿರ್ದೇಶಕರಾದ ಬಿ.ಎಸ್.ಬಿರಾದಾರ, ಎನ್.ಕೆ.ಜಂಬಗಿ ಹಾಗೂ ಸಂಘದ ಸಿಬ್ಬಂದಿಗಳು ಮತ್ತಿತರರು ಇದ್ದರು.

# ಶ್ರೀ ಸರಸ್ವತಿ ಪೂಜೆ ಹಾಗೂ ಶಾಲಾ ವಾರ್ಷಿಕ ಸ್ನೇಹ ಸಮ್ಮೇಳನ

ನೈಜ್ಯ ದೆಸೆ ನ್ಯೂಸ್

**ಮಸ್ಕಿ ತಾಲೂಕಿನ ಹಾಲಾಪೂರ ಸರಕಾರಿ ಪ್ರೌಢಶಾಲೆಯಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡಿಗೆ, ಸರಸ್ವತಿ ಭಾವಚಿತ್ರಕ್ಕೆ ಪೂಜೆಯೊಂದಿಗೆ ಶ್ರೀ ಜಗದೀಶಚಂದ್ರ ತಾತನವರಿಂದ ಶ್ಲೋಕ ಪಠಿಸಿದರು. ಉದ್ಘಾಟನೆಯನ್ನು ಶ್ರೀ ದಂಡಗುಂಡಪ್ಪ ತಾತನವರು ಜಂಗಮರಹಳ್ಳಿ ನೆರವೇರಿಸಿದರು.**



ಮಲ್ಲಪ್ಪ ಮುಖ್ಯ ಗುರುಗಳು ಮಾತನಾಡುತ್ತಾ ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು ಸಾಧಿಸಬೇಕಾದರೆ ನಿರಂತರ ಕಠಿಣ ಪರಿಶ್ರಮ ಇರಬೇಕು , ಹಾಲಾಪೂರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರು ಶಾಲೆಯ ವಿಚಾರದಲ್ಲಿ ಬಹಳಷ್ಟು ಸಹಾಯ ಸಹಕಾರ ಪ್ರೀತಿ ಅಭಿಮಾನ ಉಳ್ಳವರು, ಅವರ ಗುಣ ಮೆಚ್ಚುವಂಥದ್ದು ಎಂದೂ ಹೇಳಿದರು. ಈ ವೇಳೆಯಲ್ಲಿ ವೀರಭದ್ರಪ್ಪ ತಾತ, ಶಾಲೆಯ ಭೂದಾನಿಗಳಾದ ಶ್ರೀಮತಿ ಬಸ್ಸಮ್ಮ ಗೌಡಶಾನಿ, ಕರಿಯಪ್ಪ ಹಿರೇಕುರಬರ, ಎಸ್ ಡಿ ಎಂ ಸಿ ಅಧ್ಯಕ್ಷ ಶಾಬುದ್ದೀನ ಗುಡಿಹಾಳ, ಉಪಾಧ್ಯಕ್ಷ ಯಂಕಪ್ಪ ಪೊ.ಪಾ, ಶಾಲೆಯ ಮುಖ್ಯಗುರು ಸುಭಾಷ ಸಿಂಗ್ ಹಜಾರೆ, ಎರಿತಾತ ಮಾಪಾ, ರವಿ ದೇಸಾಯಿ, ಬಸವರಾಜ ಜಂಗಮರಳ್ಳಿ, ಮರಿಗೌಡ ಮಾಪಾ, ಬಸವರಾಜಗೌಡ, ವೆಂಕೋಬ ಪ್ರಾಂಶುಪಾಲರು, ನಾಗೇಶ್ ಪ್ರಾಚಾರ್ಯರು, ಸಿದ್ದು ಬಿ, ಲಕ್ಷ್ಮಣ ನಾಯಕ, ಯಂಕಪ್ಪ ಮಡಿವಾಳ, ಶಿವರಾಜ ಗುಡಿಹಾಳ, ಸಿದ್ದಾಥ–ರ್ ಪೊ.ಪಾ, ಅಮರೇಶ ವೈ, ಮಹಾಂತೇಶ ಪೂಜಾರಿ, ಚಂದಪ್ಪ ದೊಡ್ಮನಿ, ಶ್ರೀಕಾಂತ ಉಪನ್ಯಾಸಕರು, ಶಾಲಾ ಶಿಕ್ಷಕರಾದ ಆದೇಶಪ್ಪ, ರವೀಂದ್ರ ಕುಂಬಾರ, ಬಾಬುರಾವ, ಯಮನಪ್ಪ, ಕೃಷ್ಣಮೂರ್ತಿ, ಕಿರಣ್ ಕುಮಾರ ಮತ್ತು ಶಿಕ್ಷಕಿಯರು ಇದ್ದರು. ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

# ಹವ್ಯಕ ಭಾಷಾ ಅಕಾಡೆಮಿ ಘೋಷಣೆಗೆ ಸ್ವಾಗತಿಸಿದ ರಾಮಚಂದ್ರಾಪುರ ಮಠ



ನೈಜ್ಯ ದೆಸೆ ನ್ಯೂಸ್

**ಮಂಗಳೂರು: ಹವಿಗನ್ನಡದ ಸಂವರ್ಧನೆ ಹಾಗೂ ಸಂರಕ್ಷಣೆಯ ಉದ್ದೇಶದಿಂದ ರಾಜ್ಯ ಸರ್ಕಾರ ಘೋಷಿಸಿರುವ ಹವ್ಯಕ ಭಾಷಾ ಅಕಾಡೆಮಿ ಸ್ಥಾಪನೆ ನಿರ್ಧಾರವನ್ನು ರಾಮಚಂದ್ರಾಪುರ ಮಠ ಹರ್ಷದಿಂದ ಸ್ವಾಗತಿಸಿದೆ. ಈ ಮಹತ್ವದ ನಿರ್ಧಾರ ಕೈಗೊಂಡಿರುವುದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವ–ರಿಗೆ ಮಠದ ಪರವಾಗಿ ಕೃತಜ್ಞತೆ ಸಲ್ಲಿಸಲಾಗಿದೆ.**

ಮಾತೃಭಾಷೆಯ ಉಳಿವು, ಬೆಳವಣಿಗೆ ಹಾಗೂ ಅದರ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸುವ ಅಗತ್ಯತೆಯನ್ನು ಮನಗಂಡು ಕಳೆದ ವರ್ಷ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ತಮ್ಮ ಚಾತುರ್ಮಾಸ್ಯವನ್ನು 'ಸ್ವಭಾಷಾ ಚಾತುರ್ಮಾಸ್ಯ'ವಾಗಿ ಆಚರಿಸಿದ್ದರು. ಈ ಅವಧಿಯಲ್ಲಿ ಕನ್ನಡ ಹಾಗೂ ಅದರ ವಿವಿಧ ಉಪಭಾಷೆಗಳ ಮಹತ್ವವನ್ನು ವಿವರಿಸುವ ಮೂಲಕ ನಾಡಿನಾದ್ಯಂತ ಭಾಷಾ ಜಾಗೃತಿ ಮೂಡಿಸುವ ಕಾರ್ಯವನ್ನು ಕೈಗೊಂಡಿದ್ದರು.



ಕನ್ನಡದ ಸಮೃದ್ಧ ಪರಂಪರೆಯ ಭಾಗವಾಗಿರುವ ಹವಿಗನ್ನಡವು ವಿಶಿಷ್ಟ ಉಚ್ಚಾರಣೆ, ಪದಸಂಪತ್ತು ಹಾಗೂ ಸಂಸ್ಕೃತಿಯ ಛಾಪು ಹೊಂದಿರುವ ಪ್ರಮುಖ ಉಪಭಾಷೆಯಾಗಿದೆ. ಇದನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸರ್ಕಾರವೇ ಮುಂದಾಗಿ ಅಕಾಡೆಮಿ ಸ್ಥಾಪನೆಗೆ ನಿರ್ಧಾರ ಕೈಗೊಂಡಿರುವುದು ಅತ್ಯಂತ ಶ್ಲಾಘನೀಯ ಹೆಜ್ಜೆಯಾಗಿದೆ ಎಂದು ಮಠ ಅಭಿಪ್ರಾಯಪಟ್ಟಿದೆ. ಅಕಾಡೆಮಿ ಸ್ಥಾಪನೆಯಿಂದ ಹವಿಗನ್ನಡದ ಅಧ್ಯಯನ, ಸಂಶೋಧನೆ, ಸಾಹಿತ್ಯ ರಚನೆ ಹಾಗೂ ಭಾಷಾ ಸಂಸ್ಕೃತಿಯ ದಾಖಲಾತಿ ಕಾರ್ಯಗಳಿಗೆ ಉತ್ತೇಜನ ದೊರೆಯಲಿದೆ. ಭಾಷೆಗೆ ಸಂಬಂಧಿಸಿದ ಪುಸ್ತಕಗಳು, ನಿಘಂಟುಗಳು, ಸಂಶೋಧನಾ ಕೃತಿಗಳು ಪ್ರಕಟವಾಗುವ ಮೂಲಕ ಭಾಷೆಯ ಪರಂಪರೆ ಮತ್ತಷ್ಟು ಸಮೃದ್ಧವಾಗಲಿದೆ. ಇದೇ ವೇಳೆ ಯುವಪೀಳಿಗೆಗೆ ಹವಿಗನ್ನಡದ ಮಹತ್ವವನ್ನು ಪರಿಚಯಿಸುವ ಉದ್ದೇಶದಿಂದ ವಿವಿಧ ಕಾರ್ಯಾಗಾರಗಳು, ಸಾಹಿತ್ಯ ಸಮ್ಮೇಳನಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಭಾಷಾ ತರಬೇತಿ ಶಿಬಿರಗಳನ್ನು ಆಯೋಜಿಸುವ ಅಗತ್ಯವಿದೆ ಎಂದು ಮಠ ಅಭಿಪ್ರಾಯಪಟ್ಟಿದೆ. ಹವ್ಯಕ ಸಮುದಾಯದ ಭಾಷೆ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗಳಿಗೆ ಕೊಂಡೊಯ್ಯುವ ಮಹತ್ವದ ಕಾರ್ಯದಲ್ಲಿ ಈ ಅಕಾಡೆಮಿ ಪ್ರಮುಖ ಪಾತ್ರ ವಹಿಸಲಿದೆ. ಸರ್ಕಾರದ ಈ ನಿರ್ಧಾರ ಹವಿಗನ್ನಡದ ಉಳಿವು ಮತ್ತು ಅಭಿವೃದ್ಧಿಗೆ ಹೊಸ ದಿಕ್ಕು ನೀಡಲಿದೆ ಎಂಬ ವಿಶ್ವಾಸವನ್ನು ರಾಮಚಂದ್ರಾಪುರ ಮಠ ವ್ಯಕ್ತಪಡಿಸಿದೆ.

# ಕರ್ನಾಟಕ ಪ್ರಾಂತ ರೈತ ಸಂಘದಿಂದ ವಿವಿಧ ಬೇಡಿಕೆಗಳಿಗಾಗಿ ನಾಡ ತಹಶೀಲ್ದಾರ್ ಕಚೇರಿ ಮುಂದೆ ಧರಣಿ ಸತ್ಯಾಗ್ರಹ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಗ್ರಾಮದಲ್ಲಿ ನಾಡ ತಹಶೀಲ್ದಾರ್ ಕಚೇರಿ ಮುಂದೆ ಕರ್ನಾಟಕ ಪ್ರಾಂತ ರೈತ ಸಂಘದ ಜಾಲಹಳ್ಳಿ ಗ್ರಾಮ ಸಮಿತಿಯ ವತಿಯಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ತಕ್ಷಣ ಪ್ರಾರಂಭಿಸುವಂತೆ ಒತ್ತಾಯಿಸಿ ಧರಣಿ ಸತ್ಯಾಗ್ರಹ ನಡೆಸಲಾಯಿತು. ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ನರಸಣ್ಣ ನಾಯಕ್ ಅವರು, ಸುಮಾರು ಏಳು ತಿಂಗಳ ಹಿಂದೆ ಮಾನ್ಯ ಶಾಸಕಿ ಕರಿಯಮ್ಮಾ ಜಿ. ನಾಯಕ್ ಅವರು ಜಾಲಹಳ್ಳಿ ಗ್ರಾಮದಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿದ್ದರು.**




ಆದರೆ ಇಂದಿಗೂ ಆ ಕಾಮಗಾ–ರಿಗಳು ಪ್ರಾರಂಭವಾಗಿಲ್ಲ. ಈಗಾಗಲೇ ಘೋಷಿಸಿದ ಅಭಿವೃದ್ಧಿ ಕಾಮಗಾರಿಗಳನ್ನು ಕೂಡಲೇ ಆರಂಭಿಸಬೇಕೆಂದು ಆಗ್ರಹಿಸಿದರು. ಅದೇ ರೀತಿ ಜಾಲಹಳ್ಳಿಯಲ್ಲಿ ನೆನಗುದಿಗೆ ಬಿದ್ದಿರುವ ವಾಲ್ಮೀಕಿ ಭವನವನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು. ಈ ಹಿಂದೆ ವಾಲ್ಮೀಕಿ ಭವನ ಪೂರ್ಣಗೊಳಿಸಲು ಹೋರಾಟ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸಿದ್ದನ್ನು ಅವರು ಖಂಡಿಸಿದರು. ಇನ್ನೂ ಅಂಬೇಡ್ಕರ್ ವೃತ್ತದಿಂದ ಶ್ರೀ ರಂಗನಾಥ ದೇವಸ್ಥಾನವರೆಗೆ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ, ಮತ್ತು ಬುಳ್ಳಯ್ಯನ ಕಟ್ಟಿಯಿಂದ ಹಟ್ಟಿ ಮುಖ್ಯ ರಸ್ತೆಯವರೆಗೆ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಬೇಕು ಎಂದು ಒತ್ತಾಯಿಸಿದರು.

**ಪ್ರಮುಖ ಬೇಡಿಕೆಗಳು**

1. ಅಂಬೇಡ್ಕರ್ ವೃತ್ತದಿಂದ ಶ್ರೀ ರಂಗನಾಥ ದೇವಸ್ಥಾನವರೆಗೆ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ
2. ಬುಳ್ಳಯ್ಯನ ಕಟ್ಟಿಯಿಂದ ಹಟ್ಟಿ ಮುಖ್ಯ ರಸ್ತೆಯವರೆಗೆ ರಸ್ತೆ ನಿರ್ಮಾಣ
3. ಜಾಲಹಳ್ಳಿ ಗ್ರಾಮದ ಮುಖ್ಯ ಹೆದ್ದಾ–ರಿಯಲ್ಲಿ ರಸ್ತೆ ವಿಭಜಕ ಅಳವಡಿಕೆ
4. ಜಾಲಹಳ್ಳಿ ಗ್ರಾಮದಲ್ಲಿ ನೆನಪಿಗೆ ಬಿದ್ದಿರುವ ವಾಲ್ಮೀಕಿ ಭವನವನ್ನು ಪೂರ್ಣಗೊಳಿಸುವುದು

ಈ ಎಲ್ಲಾ ಬೇಡಿಕೆಗಳನ್ನು ತಕ್ಷಣ ಈಡೇರಿಸಿ ಕಾಮಗಾರಿಗಳನ್ನು ಪ್ರಾರಂಭಿಸಬೇಕೆಂದು ರೈತ ಸಂಘದ ಮುಖಂಡರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಗ್ರಾಮ ಸಮಿತಿ ಅಧ್ಯಕ್ಷ ಹನುಮಂತ ಮಡಿವಾಳ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಜಾಲಹಳ್ಳಿ ಘಟಕದ ಪದಾಧಿಕಾ–ರಿಗಳು, ವಾಲ್ಮೀಕಿ ಸಂಘದ ಪದಾಧಿಕಾ–ರಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು. ಗ್ರಾಮ ಪಂಚಾಯತ್ ಉಪಾಧ್ಯಕ್ಷ ವೀರೇಶ್, ಅರಕೇರಿ ಗ್ರಾಮ ಪಂಚಾಯತ್ ಸದಸ್ಯ ತಿಮ್ಮಣ್ಣ ನಾಯಕ್ ದಿವಾನ್, ಮಕ್ದೂಮ್ ಪರಾಶಿ, ಶಿವ ಮಾನ್ಯಪ್ಪ ತ್ಯಾಪ್ಲಿ, ರಂಗನಾಥ್ ಕುದ್ರಿ ಸೇರಿದಂತೆ ಹಲವರು ಹಾಜರಿದ್ದರು. ಸಂಘಟನೆ ಪದಾಧಿಕಾರಿಗಳಾದ ಹನುಮಂತ ಮಡಿವಾಳ, ಮೌನೇಶ್ ದಾಸರ್, ರಂಗನಾಥ್ ಬುಕ್ಕಲಗಡ್ಡಿ, ರಿಯಾಜ್ ಅರ್ತಿ, ಮಹಾಲಿಂಗ ದೊಡ್ಡಮನಿ, ಕಲೀಮುದ್ದಾರ್, ಬಸವರಾಜ್ ಒಂದಲಿ, ಹನುಮಂತ ಗಣೆಕಲ್, ರಾಜು ನಾಯಕ್, ಮಲ್ಲು ಗೌಡರು ಹಾಗೂ ಊರಿನ ಪ್ರಮುಖರಾದ ರಾಜ ತಿಮ್ಮಪ್ಪ ನಾಯಕ್, ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷ ರಂಗನಾಥ್ ಮಕಸಿ, ವಿನೋದ್ ಚಿಕಲ್, ಬಸವರಾಜ್ ಮಂಡಲಗುಡ್ಡ, ರಂಗಪ್ಪ ತೊಗರಿ, ದುರ್ಗಪ್ಪ ಅಗಸಿ ಮನೆ ಮತ್ತು ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಭಾಗವಹಿಸಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಇನ್ಫರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್

ಇನ್ಫರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ (ISE) (Information Science Engineering) ಎಂಬುದು 4 ವರ್ಷಗಳ ಬಿ.ಇ (B.E/B.Tech) ಕೋರ್ಸ್ ಆಗಿದೆ. ಇದು ಮಾಹಿತಿ ಸಂಗ್ರಹಣೆ, ಸಂಸ್ಕರಣೆ, ಸಂಗ್ರಹಣೆ ಮತ್ತು ವಿತರಣೆಯ ಮೇಲೆ ಕೇಂದ್ರೀಕರಿಸುತ್ತದೆ. ಇನ್ಫರ್ಮೇಶನ್ ಸೈನ್ಸ್ ಅಂಡ್ ಎಂಜಿನಿಯರಿಂಗ್ (Information Science and Engineering) ಎಂಬುದು ಗಣಿತಶಾಸ್ತ್ರ, ಜ್ಞಾನ ವಿಜ್ಞಾನ (Cognitive Science) ಮತ್ತು ಮಾಹಿತಿ ಸಿದ್ಧಾಂತ (Information Theory) ಮುಂತಾದ ವಿವಿಧ ಕ್ಷೇತ್ರಗಳ ತತ್ವಗಳು, ಮಾನದಂಡಗಳು, ವಿಧಾನಗಳು ಮತ್ತು ನವೀನತೆಯನ್ನು ಒಳಗೊಂಡಿರುವ ಒಂದು ವಿದ್ಯಾಶಾಖೆಯಾಗಿದ್ದು, ಸಂಕೀರ್ಣ ಮಾಹಿತಿ ತಂತ್ರಜ್ಞಾನ (IT) ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ. ಬೆಂಗಳೂರು ನಗರದ ಇನ್ಫರ್ಮೇಶನ್ ಸೈನ್ಸ್ ಎಂಜಿನಿಯರಿಂಗ್ ಕಾಲೇಜುಗಳು ಮಾಹಿತಿಯನ್ನು ಸಂಗ್ರಹಿಸುವುದು, ವರ್ಗೀಕರಿಸುವುದು, ಯೋಜಿಸುವುದು ಹಾಗೂ ಸಂಗ್ರಹಿಸಿಡುವ ಪ್ರಕ್ರಿಯೆಗಳ ಮೇಲೆ ವಿಶೇಷ ಗಮನ ಹರಿಸುತ್ತವೆ. ಜೊತೆಗೆ ಮೂಲ ಡೇಟಾವನ್ನು ಹೇಗೆ ವಿಶ್ಲೇಷಿಸಬೇಕು ಮತ್ತು ಅರ್ಥೈಸಬೇಕು ಎಂಬುದನ್ನೂ ಈ ವಿಷಯವು ವಿವರಿಸುತ್ತದೆ. ಇದು ಒಂದು ವೃತ್ತಿಪರ ಕ್ಷೇತ್ರವಾಗಿದ್ದು, ಸಾಮಾಜಿಕ, ಸಂಘಟನೆ ಮತ್ತು ವೈಯಕ್ತಿಕ ಅಗತ್ಯಗಳ ಹಿನ್ನೆಲೆಯಲ್ಲಿ ಮಾಹಿತಿಯ ಪರಿಣಾಮಕಾರಿ ಸಂವಹನವನ್ನು ಸಾಧಿಸುವುದನ್ನು ಉದ್ದೇಶಿಸುತ್ತದೆ. ಇದರ ಮೂಲಕ ಸಮಾಜದ ಅಭಿವೃದ್ಧಿಗೆ ಸಹಾಯವಾಗುವಂತಹ ಸಾಫ್ಟ್‌ವೇರ್ ಅಥವಾ ಎಂಬೆಡ್ಡೆಡ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.ಇದು ಕಂಪ್ಯೂಟರ್ ಸೈನ್ಸ್ (CSE) ಗೆ ಹತ್ತಿರವಾಗಿದ್ದು, ಸಾಫ್ಟ್‌ವೇರ್ ಅಭಿವೃದ್ಧಿ, ಡೇಟಾಬೇಸ್ ನಿರ್ವಹಣೆ, ಮತ್ತು ಐಟಿ (IT) ಅನ್ವಯಿಕೆಗಳ ಮೇಲೆ ಹೆಚ್ಚಿನ ಒತ್ತು ನೀಡುತ್ತದೆ. ಕೋರ್ಸ್ ವಿವರಗಳು (Course Details in Kannada): ಅರ್ಹತೆ (Eligibility): 2ನೇ ಪಿಯುಸಿ (10+2) ವಿಜ್ಞಾನ ವಿಭಾಗದಲ್ಲಿ (ಕಅಜ – ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ) ಕನಿಷ್ಠ 45–50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಕೆಸಿಇಟಿ (KCET) ಅಥವಾ ಜೆಇಇ (JEE) ಪ್ರವೇಶ ಪರೀಕ್ಷೆಗಳನ್ನು ಬರೆಯಬೇಕು. ಪ್ರಮುಖ ವಿಷಯಗಳು (Core Subjects): ಪ್ರೋಗ್ರಾಮಿಂಗ್ (Java, Python), ಡಾಟಾ ಸ್ಟ್ರಕ್ಚರ್ಸ್, ಅಲ್ಗಾರಿದಮ್ಸ್, ಆಪರೇಟಿಂಗ್ ಸಿಸ್ಟಮ್, ಕಂಪ್ಯೂಟರ್ ನೆಟ್‌ವರ್ಕಿಂಗ್, ಡೇಟಾಬೇಸ್ ಮ್ಯಾನೇಜ್‌ಮೆಂಟ್ (DBMS), ಮತ್ತು ಸಾಫ್ಟ್‌ವೇರ್ ಇಂಜಿನಿಯರಿಂಗ್. ಕೌಶಲ್ಯಗಳು (Skills Required): ತಾರ್ಕಿಕ ಚಿಂತನೆ (Analytical thinking), ಪ್ರೋಗ್ರಾಮಿಂಗ್ ಜ್ಞಾನ, ಸಮಸ್ಯೆ ಪರಿಹರಿಸುವ ಸಾಮರ್ಥ್ಯ. ಉದ್ಯೋಗಾವಕಾಶಗಳು (Career Opportunities): ಸಾಫ್ಟ್‌ವೇರ್ ಡೆವಲಪರ್, ಸಿಸ್ಟಮ್ಸ್ ಅನಾಲಿಸ್ಟ್, ಡೇಟಾ ಸೈಂಟಿಸ್ಟ್, ಐಟಿ ಕನ್ಸಲ್ಟೆಂಟ್, ನೆಟ್‌ವರ್ಕ್ ಮ್ಯಾನೇಜರ್, ಮತ್ತು ವೆಬ್ ಡೆವಲಪರ್.

1ನೇ ಪುಟದಿಂದ....

ಓದಿಕೊಳ್ಳಿ. ಕೇಂದ್ರ ಸರ್ಕಾರ ಆರ್ಥಿಕ ಶಿಸ್ತನ್ನು ಮೀರಿ ಸಾಲ ಮಾಡಿದೆ. ವಿತ್ತೀಯ ಕೊರತೆ ಮಿತಿಮೀರಿದೆ. ನಿಯಮಗಳ ಪ್ರಕಾರ ಜಿಡಿಪಿಯ ಶೇ. 25ರ ಒಳಗೆ ಸಾಲದ ಮಿತಿ ಇರಬೇಕು. ವಿತ್ತೀಯ ಕೊರತೆ ಶೇ. 3ರ ಒಳಗಿರಬೇಕು. ಕರ್ನಾಟಕದ ಸಾಲ ಶೇ. 24.94ರ ಒಳಗಿದೆ. ವಿತ್ತಿಯ ಕೊರತೆ ಶೇ. 2.95ರಷ್ಟಿದೆ. ಕೇಂದ್ರ ಸರ್ಕಾರದ ಸಾಲ 218 ಲಕ್ಷ ಕೋಟಿ ರೂ.ಗಳಷ್ಟಿದ್ದು, ಇದು ಜಿಡಿಪಿಯ ಶೇ. 55.6 ರಷ್ಟು, ಕೇಂದ್ರದ ವಿತ್ತೀಯ ಕೊರತೆ ಶೇ. 4.4ರಷ್ಟಿದೆ. ಕರ್ನಾಟಕದ ಜಿಡಿಪಿ ಪ್ರಕಾರ 33 ಲಕ್ಷ ಕೋಟಿ ರೂ. ಸಾಲ ಪಡೆಯಲು ಅವಕಾಶ ಇದೆ ಎಂದರು. ಬಿಜೆಪಿಯವರು ಯಾವುದನ್ನೂ ಸರಿಯಾಗಿ ತಿಳಿದುಕೊಳ್ಳದೇ ಮಾತನಾಡುತ್ತಿದ್ದಾರೆ. ರಾಜ್ಯದ ಸಾಲದ ಬಗ್ಗೆ ಮಾತನಾಡುವ ವಿರೋಧ ಪಕ್ಷದವರು ಮೋದಿ ಸರ್ಕಾರದ ಸಾಲದ ಬಗ್ಗೆಯೂ ತಿಳಿದುಕೊಳ್ಳಲಿ ಎಂದು ತಿರುಗೇಟು ನೀಡಿದರು. ತಮ ಬಜೆಟ್ ಯಾವುದೇ ಒಂದು ವರ್ಗಕ್ಕೇ ಸೀಮಿತವಲ್ಲ. ಇಡೀ ರಾಜ್ಯದ ಆರ್ಥಿಕ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗಿದೆ. ಕೇಂದ್ರ ಸರ್ಕಾರ ನಮ ಪಾಲಿನ ಅನುದಾನವನ್ನು ನೀಡದೇ ಇರುವುದರಿಂದ ಆರ್ಥೀಕ ಒತ್ತಡ ಹೆಚ್ಚಾಗಿದೆ. ಜಿಎಸ್‌ಟಿ ಪರಿಷ್ಕರಣೆಯಿಂದ ರಾಜ್ಯಕ್ಕೆ 10 ಸಾವಿರ ಕೋಟಿ ರೂ. ನಷ್ಟವಾಗಿದೆ. ಇದರ ಬಗ್ಗೆಯೂ ಚರ್ಚೆ ಮಾಡಬೇಕೆಂದು ಹೇಳಿದರು.

# ಬಳಗಾನೂರು ಪಟ್ಟಣ ಪಂಚಾಯತಿ ಉಪಾಧ್ಯಕ್ಷರಾಗಿ ಹುಸೇನಬಾಷಾ ಅವಿರೋಧ ಆಯ್ಕೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲೂಕಿನ ಬಳಗಾನೂರು ಪಟ್ಟಣ ಪಂಚಾಯತಿ ಉಪಾಧ್ಯಕ್ಷರಾಗಿದ್ದ ಮಂಜುನಾಥ–ಸ್ವಾಮಿ ರಾಜಿನಾಮೆಯಿಂದ ತೆರವಾಗಿದ್ದ ಉಪಾಧ್ಯಕ್ಷಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಹುಸೇನಬಾಷಾ ಬೂದಗುಂಪಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ತಹಸೀಲ್ದಾರ್ ಹಾಗೂ ಚುನಾವಣಾಧಿಕಾ–ರಿಯಾದ ಮಂಜುನಾಥ ಭೋಗಾವತಿ ಶನಿವಾರ ಘೋಷಿಸುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.**

ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದು, ಹುಸೇನಬಾಷಾ ಬೂದಗುಂಪಾ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು. ಮಧ್ಯಾಹ್ನ 1 ಗಂಟೆಗೆ ನಾಮಪತ್ರ ಪರೀಶೀಲನೆ ನಡೆಯಿತು. ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬರೇ ನಾಮಪತ್ರ ಸಲ್ಲಿಕೆಯಾಗಿರುವ ಹಿನ್ನಲೆಯಲ್ಲಿ ಹುಸೇನಬಾಷಾ ಉಪಾಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಘೋಷಿಸಿದರು. ಪಟ್ಟಣ ಪಂಚಾಯತಿ ಒಟ್ಟು 12ಜನ ಚುನಾಯಿತ ಸದಸ್ಯರನ್ನು ಹೊಂದಿದ್ದು, ಪ.ಪಂ



**ಉಪಾಧ್ಯಕ್ಷರಾಗಿ ಆಯ್ಕೆ ಮಾಡಲು ಕಾರಣಿಕಾರ್ಯರಾದ ಎಲ್ಲರಿಗೂ ಧನ್ಯವಾದಗಳು ತಿಳಿಸುತ್ತೇನೆ. ನನ್ನ ಅಧಿಕಾರದ ಅವಧಿಯಲ್ಲಿ ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡುತ್ತೇನೆ. ಪಟ್ಟಣ ಅಭಿವೃದ್ಧಿಗೆ ಸದಾ ಶ್ರಮಿಸುತ್ತೇನೆ. – ಹುಸೇನಭಾಷಾ ಬೂದಗುಂಪಾ ನೂತನ ಉಪಾಧ್ಯಕ್ಷರು. ಪ.ಪಂ ಬಳಗಾನೂರು**

ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ 5 ಜನ ಹಾಗೂ ಬಿಜೆಪಿಯಿಂದ 6 ಜನ ಮತ್ತು ಒಬ್ಬರು ಪಕ್ಷೇತರ ಸದಸ್ಯರುಗಳಾಗಿ ಆಯ್ಕೆಯಾಗಿದ್ದರು.

ಈ ಹಿಂದೆ ನಡೆದ ಪ.ಪಂ ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆ ಸಂದರ್ಭದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದ ಹುಸೇನ್‌ಬಾಷಾ ಕಾಂಗ್ರೇಸ್‌ಗೆ ಬೆಂಬಲ ನೀಡುವುದರ ಮೂಲಕ ಕಾಂಗ್ರೆಸ್ ಸೇರಿದ್ದರು. ಸನ್ಮಾನ: ಮಸ್ಕಿ, ಸಿಂಧನೂರು ಕ್ಷೇತ್ರದ ಕಾಂಗ್ರೇಸ್ಸಿನ ವಿವಿಧ ಘಟಕಗಳ ಪಧಾಧಿಕಾರಿಗಳು ಪ.ಪಂ ಅಧ್ಯಕ್ಷರು, ಸದಸ್ಯರು ಮತ್ತು ಮುಖಂಡರು, ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು,



ಸಮುದಾಯದ ಮುಖಂಡರುಗಳು ನೂತನವಾಗಿ ಉಪಾಧ್ಯಕ್ಷರಾಗಿ ಆಯ್ಕೆಯಾದ ಹುಸೇನಬಾಷಾ ಅವರನ್ನು ಸನ್ಮಾನಿಸಿ ಗೌರವಿಸಿದರು.

ಪಿಎಸ್‌ಐ ಎರಿಯಪ್ಪ ಅಂಗಡಿ ನೇತೃತ್ವದಲ್ಲಿ ಪೊಲೀಸರು ಸೂಕ್ತ ಬಂದೋಬಸ್ತ್ ಕಲ್ಪಿಸಿದ್ದರು. ಈ ಸಂದರ್ಭದಲ್ಲಿ ಶಾಸಕ ಆರ್.ಬಸನಗೌಡ ತುರ್ವಿಹಾಳ, ಪ.ಪಂ ಅಧ್ಯಕ್ಷ ಶಿವುಕುಮಾರ ನಾಯಕ, ಪ.ಪಂ ಮುಖ್ಯಾಧಿಕಾರಿ ಗೋಪಾಲ ನಾಯಕ, ಮಾಜಿ ಉಪಾಧ್ಯಕ್ಷ ಮಂಜುನಾಥ–ಸ್ವಾಮಿ, ರಾಜಶ್ರೀ, ಸಂಜಯಕುಮಾರ, ಲತಾ ತಿರುಕನಗೌಡ, ಶಾಂತ ಹನುಮಂತ ಸೇರಿದಂತೆ ಕಾಂಗ್ರೇಸ್ ಸದಸ್ಯರು ಮತ್ತು ಕಾರ್ಯಕರ್ತರಿದ್ದರು.

# ವಿದ್ಯಾರ್ಥಿ ಜೀವನ ಮೌಲ್ಯ ಅಳವಡಿಸಿಕೊಳ್ಳಲಿ: ಕೆ.ಅನಂತರಾಜನಾಯಕ



ನೈಜ್ಯ ದೆಸೆ ನ್ಯೂಸ್

**ಅರಕೇರಾ: ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಲು ಏಕಾಗ್ರತೆ,ಬರೆದು ಅಭ್ಯಾಸ ಮಾಡುವುದು ನಿರಂತರ ಪರಿಶ್ರಮ ಅತ್ಯಗತ್ಯ ಕೇವಲ ಪುಸ್ತಕ ಜ್ಞಾನವಿದ್ದರೆ ಸಾಲದು ಮಕ್ಕಳಿಗೆ ಒಳ್ಳೆಯ ಸಂಸ್ಕಾರ– ಸಂಸ್ಕೃತಿ ಆಧಾರಿತ ಜೀವನ ಶಿಕ್ಷಣ ಸಿಗುವಂತಾಗಬೇಕೆಂದು ಕೆ.ಅನಂತರಾಜನಾಯಕ ಅಭಿಪ್ರಾಯಪಟ್ಟರು.**

ಅವರು ಅರಕೇರಾ ಪಟ್ಟಣದಲ್ಲಿನ ಶ್ರೀಸಿದ್ದಯ್ಯ ಹವಲ್ದಾರ ಸರಕಾರಿ ಬಾಲಕರ ಪ್ರೌಢ ಶಾಲೆಯಲ್ಲಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಬೀಳ್ಕೋಡುಗೆ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ ವಿದ್ಯಾರ್ಥಿಗಳ ಶೈಕ್ಷಣ ಕ ಜೀವನದ ಒಂದು ಮಹತ್ವದ ಹಂತಕ್ಕೆ ವಿದಾಯ ಹೇಳಿ ಹೊಸ ಅಧ್ಯಾಯದತ್ತ ಹೆಜ್ಜೆ ಇಡುವ ಈ ಕ್ಷಣವನ್ನು ವಿದ್ಯಾರ್ಥಿಗಳ ಶೈಕ್ಷಣ ಕ ಸಾಧನೆ,ಶಾಲೆಯಲ್ಲಿ ಕಳೆದ ಅಮೂಲ್ಯ ಕ್ಷಣಗಳು ಮಕ್ಕಳಿಗೆ ಶಿಕ್ಷಣದೊಂದಿಗೆ ಜೀವನ ಮೌಲ್ಯ ಮಾನವೀಯ ಗುಣ ನಡೆತೆಗಳನ್ನು ಅಳವಡಿಸಿಕೊಳ್ಳಿ. ಶಿಕ್ಷಕರ ಮಾತನ್ನು ಚಾಚೂ ತಪ್ಪದೇ ಪಾಲಿಸಬೇಕು 10ನೇ ತರಗತಿ ಪರೀಕ್ಷೆಯಲ್ಲಿ ಉತ್ತಮ ಅಂಕಪಡೆದು ಉನ್ನತ ಸ್ಥಾನ ಪಡೆಯುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಚಂದ್ರಶೇಖರ ಬಂಡಾರಿ ಉಪನಿರ್ದೇಶಕರು ಅಭಿವೃದ್ಧಿ ಡಯಟ್ ಯರಮರಸ್ ವಿದ್ಯಾರ್ಥಿಗಳು ಜೀವನದಲ್ಲಿ ಒಳ್ಳೆಯ ನಾಗರಿಕರಾಗಲು ಸತತ ಪರಿಶ್ರಮ ಅಗತ್ಯ.ವಿದ್ಯಾರ್ಥಿ ಜೀವನ ಬಂಗಾರದ ಜೀವನ ಅದನನು ಸದುಪಯೋಗ ಪಡಿಸಿಕೊಳ್ಳಿ ಪರಿಕ್ಷೆಯನ್ನು ಧೈರ್ಯದಿಮದ ಎದುರಿಸಿ ಉನ್ನತ ಗುರಿಗಳನ್ನು ಸಾಧಿಸಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ವಿದ್ಯಾರ್ಥಿಗಳಿಗೆ ಓದಿನ ಕಡೆಗೆ ಹೆಚ್ಚಿನ ಸಮಯವನ್ನು ನೀಡಬೇಕು .ಭಯದಿಂದ ಪರಿಕ್ಷೆಯನ್ನು ಬರೆಯದೆ ಸಂತೋಷದಿಂದ ದೈರ್ಯದಿಂದ ಪರಿಕ್ಷೆಯನ್ನು ಬರೆಯಬೇಕು ಎಂದು ವಿದ್ಯಾರ್ಥಿಗಳಿಗೆ ಧೈರ್ಯ ಹೇಳಿದರು.ಪ್ರಾಸ್ತವಿಕವಾಗಿ ಹುಸೇನಬಾಷ ಮುಖ್ಯೋಪಾದಯ್ಯರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಕೆ.ಅನಂತರಾಜನಾಯಕರವರು ಶ್ರೀಸಿದ್ದಯ್ಯ ಹವಲ್ದಾರ ಸರಕಾರಿ ಬಾಲಕರ ಪ್ರೌಢಶಾಲೆಯಲ್ಲಿ ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ, ಬಸವಲಿಂಗಯ್ಯಸ್ವಾಮಿ ಹಿರೇಮಠ,ಬಾಲರಾಜ, ಶಿವಕರಣ ತಂದೆ ಶರಣಯ್ಯಸ್ವಾಮಿ,ಅಭಿಮಾನ್ಯು, ಅಜೀತಕುಮಾರ ಶಾಖೆ, ಇಮ್ರಾನ್,ಸಮುದಾನಿ ಇವರನ್ನು ಸನ್ಮಾನಿಸಿಗೌರವಿಸಲಾಯಿತು.ಸಂದರ್ಭದಲ್ಲಿ ವೇದಿಕೆ ಮೇಲೆ ಸಿದ್ದಾರ್ಥ ಹವಲ್ದಾರ,ನಾಗರಾಜನಾಯಕ ಕರ್ನಾಳ ಮಾಜಿ ಎಸ್ ಡಿ ಎಂಸಿ ಅಧ್ಯಕ್ಷರು,ಸೂಗೂರೇಶ್ವರ ಎಸ್ ಗುಡಿ ಜಿಲ್ಲಾ ಕಾರ್ಯನಿರತ ಪತ್ರಕರ್ತ ಸಂಘದ ಉಪಾದ್ಯಕ್ಷರು, ಮುಖ್ಯೋಪಾಧಯ್ಯರಾದ ಹುಸೇನಬಾಷ,ದೇವದತ್ತಾ ಉಪಸ್ಥಿತರಿದ್ದರು. ಸರಸ್ವತಿ ಭಾವಚಿತ್ರಕ್ಕೆ ಬಸಲಿಂಗಯ್ಯಸ್ವಾಮಿ ಹಿರೇಮಠ ಪೂಜೆ ಸಲ್ಲಿಸಿದರು. 10 ನೇ ತರಗತಿ ವಿದ್ಯಾರ್ಥಿಗಳಿಗೆ ಶುಭಹಾರೈಸಿ ಮಕ್ಕಳಿಗೆ ನೆನೆಪಿನಕಾಣ ಕೆಯನ್ನು ವಿತರಿಸಲಾಯಿತು. ಸ್ವಾಗತ ಪ್ರಾರ್ಥನೆ ಗೀತೆ ಬಾಲರಾಜ, ಕೊನೆಯಲ್ಲಿ ಇಮ್ರಾನ ವಂದಿಸಿದರು.

ಚಿತ್ರಸುದ್ದಿ ಸಂಖ್ಯೆ 7(3) ಶ್ರೀಸಿದ್ದಯ್ಯ ಹವಲ್ದಾರ ಸರಕಾರಿ ಬಾಲಕರ ಪ್ರೌಢಶಾಲೆಯಲ್ಲಿ ಅತಿಥಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ, ಅತಿಥಿ ಶಿಕ್ಷಕರಿಗೆ ಕೆ.ಅನಂತರಾಜನಾಯಕ ಸನ್ಮಾನಿಸಿ ಗೌರವಿಸಿದರು.

# ಎಲ್. ಬಿ.ಕೆ ಪದವಿ ಪೂರ್ವ & ನೊಬಲ್ ಪದವಿ ಕಾಲೇಜಿನಲ್ಲಿ ಬೃಹತ್ ಉದ್ಯೋಗ ಮೇಳ– 12 ಮಾ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಿರುದ್ಯೋಗಿ ಯುವಕ–ಯುವತಿಯ–ರಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸಮರ್ಥನಂ ಅಂಗವಿಕಲರ ಸಂಸ್ಥೆ ಬಳ್ಳಾರಿ, ನೋಬೆಲ್ ಡಿಗ್ರಿ ಕಾಲೇಜು ಹಾಗೂ ರೇಣುಕ ಆಸ್ಪತ್ರೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ. ಈ ಮೇಳದಲ್ಲಿ ಪಾಲ್ಗೊಳ್ಳಲು ಅಭ್ಯರ್ಥಿಗಳು 18 ರಿಂದ 35 ವರ್ಷಗಳ ಒಳಗಿನವರಾಗಿರಬೇಕು,**

ವಿದ್ಯಾರ್ಹತೆ: SSLC, PUC, ITI, Diploma, B.A, B.Com, B.B.A, B.C.A, B.Sc, Nursing, Pharmacy, B.Ed, ಮತ್ತು ಸ್ನಾತಕೋತ್ತರ ಪದವಿ (Post Graduation) ಪಡೆದ ಎಲ್ಲಾ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ ಈ ಉದ್ಯೋಗ ಮೇಳದಲ್ಲಿ Flipkart, Manpower Solutions, Pragati Finance , Tsn Supply chain Solutions New opportunity, Idfc First bank,HDFC




BANK, Sriram Finance, Tyger Capital, Swaman Financial Services, BSS Micro Finance , Creative Engineers ಇಂತಹ 25 ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿದ್ದು, ಅರ್ಹ ಅಭ್ಯರ್ಥಿಗಳನ್ನು ನೇರ ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲಿವೆ. ವಿಶೇಷವಾಗಿ, ಈ ಮೇಳದಲ್ಲಿ ವಿಶೇಷಚೇತನರಿಗೆ (Physically Challenged) ಆದ್ಯತೆ ಮತ್ತು ವಿಶೇಷ ಅವಕಾಶಗಳನ್ನು ನೀಡಲಾಗಿದೆ ಹಾಗೂ ಈ ಉದ್ಯೋಗ ಮೇಳದಲ್ಲಿ 500 ಕ್ಕೂ ಹೆಚ್ಚು ಅಭ್ಯರ್ಥಿಗಳ ನಿರೀಕ್ಷೆ ಇದ್ದು ಸಿಂಧನೂರು ಭಾಗದ ಯುವಜನತೆ ಉದ್ಯೋಗ ಮೇಳಕ್ಕೆ ಬರುವವರು ತಮ್ಮ ಆದ–ಾರ್ ಕಾರ್ಡ್ , ಶೈಕ್ಷಣಿಕ ದಾಖಲಾತಿಗಳು ಹಾಗೂ ಸ್ವವಿವರಗಳ (Resume/CV) ಪ್ರತಿಗಳೊಂದಿಗೆ ಆಗಮಿಸಿ, ಈ ಸದವಕಾಶವನ್ನು ಬಳಸಿಕೊಂಡು ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂದು




ಸಂಘಟಕರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

ಮೇಳದ ವಿವರಗಳು:
ದಿನಾಂಕ: 12.03.2026 (ಗುರುವಾರ)
ಸಮಯ: ಬೆಳಿಗ್ಗೆ 9:00 ರಿಂದ ಮಧ್ಯಾಹ್ನ 2:00 ಗಂಟೆಯವರೆಗೆ
ಸ್ಥಳ: ಎಲ್. ಬಿ.ಕೆ ಪದವಿ ಪೂರ್ವ ಮತ್ತು ನೊಬಲ್ ಪದವಿ ಕಾಲೇಜು, ರೇಣುಕ ಆಸ್ಪತ್ರೆ ಎದುರುಗಡೆ, ಆದರ್ಶ ಕಾಲೋನಿ, ಸಿಂಧನೂರು.
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ನಂಬರ್ ಗಳಿಗೆ ಸಂಪರ್ಕಿಸಿ: 9480812138 7676534241 9916758739.

# ಬೇಸಿಗೆಯಲ್ಲಿ ಕುಡಿಯುವ ನೀರು ಸಮಸ್ಯೆ ಆಗಬಾರದು ಅಧಿಕಾರಿಗಳಿಗೆ ಸೂಚನೆ ನೀಡಿದ ಶಾಸಕ ಹಂಪನಗೌಡ

ನೈಜ್ಯ ದೆಸೆ ನ್ಯೂಸ್

**ಇನ್ನೇನು ಬೇಸಿಗೆ ಪ್ರಾರಂಭವಾಗಿದೆ ತಾಲೂಕಿನ ಸಮಸ್ತ ಜನತೆಗೆ ಹಾಗೂ ಜಾನುವಾರುಗಳಿಗೆ ನೀರಿನ ತೊಂದರೆ ಬರಬಾರದು, ಯಾವ ಗ್ರಾ.ಪಂ.ಯಲ್ಲಿ ಎಷ್ಟರ ಮಟ್ಟಿಗೆ ಮತ್ತು ಇನ್ನು ಎಷ್ಟು ದಿನಗಳ ಕಾಲ ಜನರಿಗೆ ನೀರನ್ನು ಸರಬರಾಜು ಮಾಡಬಹುದು ಎಂಬ ಲೆಕ್ಕಾಚಾರವನ್ನು ಶಾಸಕ ಹಂಪನಗೌಡ ಬಾದರ್ಲಿ ಗ್ರಾ.ಪಂ.ಪಿಡಿಒ ಮತ್ತು ಅಧಿಕಾರಿಗಳಿಗೆ ಮಾಹಿತಿ ಕೇಳಿದರು.**

ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಶನಿವಾರ ಶಾಸಕ ಹಂಪನಗೌಡ ಬಾದರ್ಲಿಯವರ ನೇತೃತ್ವದಲ್ಲಿ ಬೇಸಿಗೆಯಲ್ಲಿ ಕುಡಿವ ನೀರಿನ ಸಮಸ್ಯೆ ಆಗದಂತೆ ತಾಲೂಕಿನ ಎಲ್ಲಾ ಅಧಿಕಾರಿಗಳನ್ನು ಕರೆದು ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ಕಾರಣಕ್ಕೂ ಕುಡಿವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಗ್ರಾಮ ಪಂಚಾಯತಿ ಪಿಡಿಒ, ನೀರಾವರಿ ಇಲಾಖೆಯ ಅಧಿಕಾರಿಗಳ ಮೇಲೆ ಇದೆ ಎಂದರು. ತಾಲೂಕಿನ ಎಲ್ಲಾ ಗ್ರಾ.ಪಂ.ವ್ಯಾಪ್ತಿಯಲ್ಲಿನ ಪಿಡಿಒ ಅವರು, ಸಧ್ಯಕ್ಕೆ ಒಂದೆರಡು ತಿಂಗಳ ಮಟ್ಟಿಗೆ



ಕುಡಿವ ನೀರಿನ ಸಮಸ್ಯೆ ತಲೆದೂರದು, ಎಂದು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳು ಶಾಸಕ–ರಿಗೆ ಮಾಹಿತಿ ನೀಡಿದರು. ತಾಲೂಕಿನಲ್ಲಿ ಎಲ್ಲಿಯಾದರೂ ನೀರಿನ ಬಗ್ಗೆ ಸಮಸ್ಯೆ ಬಂದರೆ ಅದಕ್ಕೆ ನೀವೆ ಜವಾಬ್ದಾರಿಗಳು, ಕ

ಾರಣ ಕುಡಿಯುವ ನೀರಿನ ಸಮಸ್ಯೆ ಬಗೆ ಹರಿಸುವ ಪ್ರಯುಕ್ತ ಬೇಕಾದ ಹಣದ ಯೋಜನೆಯ ವರದಿ ರೆಡಿ ಮಾಡಿ ನನಗೆ ನೀಡಿದರೆ, ನಿಮಗೆ ಎಷ್ಟು ಅನುದಾನ ಬೇಕೆಂದು ಕೊಡಿ, ಸರ್ಕಾರದಿಂದ ಅನುದಾನವನ್ನು ಒದಗಿಸಿ ಕೊಡುತ್ತೇನೆ, ಯಾವುದೇ ಕಾರಣಕ್ಕೂ ಕುಡಿವ ನೀರಿನ ವಿಷಯದಲ್ಲಿ ಅಧಿಕಾ–ರಿಗಳು ನಿರ್ಲಕ್ಷ್ಯವನ್ನು ಮಾಡಬೇಡಿ ಎಂದರು. ದಿದ್ದಿಗಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಸಮಸ್ಯೆ ಬಗೆಹರಿಸುವಂತೆ ಪಿಡಿಒ. ತಾಲುಕಾ ಪಂಚಾಯತ ಇಒ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಇಲಾಖೆಯ ಅಧಿಕಾರಿಗಳಿಗೆ ಲಿಖಿತ ರೂಪದಲ್ಲಿ ಈಗಾಗಲೇ ದೂರು ನೀಡಿದರು ಸಹ ಈ ಸಮಸ್ಯೆಯನ್ನು ಬಗೆ ಹರಿಸಿಲ್ಲ ಎಂದು ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಮೌನೇಶ ಸಭೆಗೆ ಹಾಜರಾಗಿ ಶಾಸಕರ ಗಮನಕ್ಕೆ ತಂದಾಗ ಸಮಸ್ಯೆ ಬಗೆಹರಿಸುವಂತೆ ಶಾಸಕರು ಅಧಿಕಾರಿಗಳಿಗೆ ಸೂಚನೆ ನೀಡಿದರು.



ತಾಲೂಕಿನ ಅಲಬನೂರು ಗ್ರಾಮದಲ್ಲಿ ಬಡವರಿಗೆ ನಿವೇಶನ ಕೊಡುವ ಉದ್ದೇಶದಿಂದ ಮೀಸಲಿಟ್ಟ 6 ಎಕರೆ 12 ಗುಂಟೆ ಸರ್ಕಾರಿ ಜಾಗದಲ್ಲಿ ಕೆಲವರು ಒತ್ತುವರಿ ಮಾಡಿಕೊಂಡಿದ್ದಾರೆ. ಪೊಲೀಸರ ಸಹಕಾರದಿಂದ ಒತ್ತುವರಿಯಾದ ಜಾಗವನ್ನು ತೆರವು ಕಾರ್ಯಚರಣೆ ಮಾಡುವಂತೆ ಶಾಸಕರು ಪಿಡಿಒ ಮತ್ತು ಸರ್ವೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದೇ ರೀತಿ ತಾಲೂಕಿನ ಬಸವರಾಜಶ್ವರಿ ಕ್ಯಾಂಪಿನಲ್ಲಿ 2 ಎಕರೆ 16 ಗುಂಟೆ ಜಾಗವು ಕೂಡ ರಾಜ್ಯಪಾಲಕರ ಹೆಸರಿನಲ್ಲಿದ್ದು, ಸರ್ವೇ ಅಧಿಕಾರಿಗಳು 2024ರ ಡಿಸೆಂಬರ್ 22ರಲ್ಲಿ ಇಸ್ಸಾ ನಕ್ಷೆ ಬದಲಾಯಿಸಿ ಈಗ ಸರ್ಕಾರಿ ಜಾಗವನ್ನು ಇಲ್ಲದಂತೆ ಮಾಯ ಮಾಡಿ ಬೇರೆಯವರಿಗೆ ಮಾರಾಟ ಮಾಡಲು ಅನುಕೂಲ ಮಾಡಿದ್ದು, ಶಾಸಕರ ಆಕ್ರೋಶಕ್ಕೆ ಕಾರಣವಾಯಿತು.

ತಪ್ಪು ಮಾಡಿದ ಸರ್ವೇ ಅಧಿಕಾರಿಯಾಗಲಿ ಯಾರೇ ಆಗಲಿ ಅಮಾನತು ಮಾಡುವಂತೆ ಸರ್ವೆ ಎಡಿಎಲ್ ಆರ್, ಬೀಮರಾಜ ಹವಾಲ್ದಾರಿಗೆ ಸೂಚನೆ ನೀಡಿ ವರದಿ ನೀಡುವಂತೆ ತಾಕೀತು ಮಾಡಿದರು.

ಜೆ.ಜೆ.ಎಂ. ಯೋಜನೆಯ ಅಡಿಯಲ್ಲಿ ಕೆಲವು ಕಾಮಗಾರಿಗಳು ನಡೆದಿದ್ದು, ಇನ್ನೂ ಕೆಲವು ಪ್ರಗತಿ ಹಂತದಲ್ಲಿವೆ ಎಂದು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಎಇಇ ವಿಜಯಲಕ್ಷ್ಮೀ ಸಭೆಗೆ ಮಾಹಿತಿ ನೀಡಿದರು. ನಿರ್ಮಿತ ಕೇಂದ್ರ ಹಾಗೂ ಲ್ಯಾಂಡ್ ಆರ್ಮಿ ಅಧಿಕಾರಿಗಳು ಸಿಡಿಪಿಓ ತಮ್ಮ ಇಲಾಖೆಯಿಂದ ನಡೆದ ಕಾಮಗಾ–ರಿಗಳ ಪ್ರಗತಿ ವರದಿಯನ್ನು ಸಭೆಗೆ ಒಪ್ಪಿಸಿದರು. ಈ ವೇಳೆ: ಜಿಲ್ಲಾ ಪಂಚಾಯತಿ ಯೋಜನಾ ನಿರ್ದೇಶಕರಾದ ಶರಣಬಸವರಾಜ, ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ, ಇಒ ಚಂದ್ರಶೇಖರ, ನಗರಸಭೆ ಪೌರಾಯುಕ್ತ ಪಾಂಡುರಗ ಇಟಗಿ, ನಗರ ಪೊಲೀಸ್ ಠಾಣೆ.ಪಿ.ಐ.ವೀರಾರೆಡ್ಡಿ, ಗ್ರಾಮೀಣ ಸಿಪಿಐ ವಿನಾಯಕ, ಸೇರಿಂದತೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಆಡಳಿತಾಧಿಕಾರಿಗಳು, ನೀರಾವರಿಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.